
# ಕಾನನ

ಅಕ್ಟೋಬರ್–2025


ನಿಸರ್ಗದೆಡೆಗೆ ಪಯಣ



WCG
Wildlife Conservation Group

# ಕಾನನ

## ನಿಸರ್ಗದೆಡೆಗೆ ಪಯಣ




**ಪ್ರಧಾನ ಸಂಪಾದಕರು**

ಡಾ. ಅಶ್ವಥ ಕೆ. ಎನ್.

**ಮುಖ್ಯ ಸಂಪಾದಕರು**

ನಾಗೇಶ್ ಒ. ಎಸ್.

**ಸಹ ಸಂಪಾದಕರು**

ಧನರಾಜ್ ಎಂ.

ಮಹದೇವ ಕೆ. ಸಿ.

**ಸಂಪಾದಕೀಯ ತಂಡ**

ವಿಪಿನ್ ಬಾಳಿಗ ಬಿ. ಎಸ್.

ಆನಂದ್ ಎಸ್.

ಮುರಳಿ ಎಸ್.

ಹುಸೇನ್ ನೇಣಿಕೆ

ಸಂಗಮನಾಥ ಪಿ. ಸಜ್ಜನ

ಸುಕನ್ಯ


© ಮಧುಸೂದನ್ ಎಂ.

ಅಕ್ಟೋಬರ್–2025

## ಲೇಖನಗಳು


* ಸೈಲೆಂಟ್ ಕಿಲ್ಲರ್ – ಮಂಜುನಾಥ್ ಅಮಲಗೊಂದಿ
* ವನಸುಮ – ಕೆ. ಪಿ. ಶಂಕರಪ್ಪ<br>ಶಾಂತಮ್ಮ ಎಸ್.
* ವನಬಂಧ – 05 – ಅಕ್ಷತ ಹೆಚ್. ಕೆ.
* ಫಂಗೈ ಎಸೆಯುತ್ತಿರುವ ಅಲರ್ಜಿ ಎಂಬ ಭರ್ಜಿ! (ವಿವಿ ಅಂಕಣ) – ಜೈಕುಮಾರ್ ಆರ್.
* ನೆಲದನಿ (ಕವನ) – ನಾಗರಾಜ ಬಿ. ನಾಯ್ಕ
* ಪ್ರಕೃತಿ ಬಿಂಬ – ಭಗವತಿ ಬಿ. ಎಂ.<br>ದೀಪ್ತಿ ಎನ್.





ಮುಖಪುಟ ಛಾಯಾಚಿತ್ರ

ಬಿದಿರು ಮಂಡಲ

ಮುಖಪುಟ

ಡಾ. ಅಶ್ವಥ ಕೆ. ಎನ್.

ವಿನ್ಯಾಸ

ಧನರಾಜ್ ಎಂ.


© ಡಾ. ಅಶ್ವಥ ಕೆ. ಎನ್.





# ಸೈಲೆಂಟ್ ಕಿಲ್ಲರ್

ರಾತ್ರಿ 9 ಗಂಟೆಯ ಸಮಯ. ಇನ್ನೇನು ಎಲ್ಲರೂ ಊಟ ಮುಗಿಸಿ ಮಲಗಿಕೊಳ್ಳುವುದಕ್ಕೆ ಸಿದ್ದರಾಗುತ್ತಿದ್ದರು. ಪ್ರತಿನಿತ್ಯದಂತೆ ನಾನು 9 ಗಂಟೆಯ ನಂತರ ಊಟ ಮಾಡುವ ಸಲುವಾಗಿ ಕೈ ತೊಳೆದುಕೊಂಡು ಮನೆಯ ಪಡಸಾಲೆಗೆ ಹೊಕ್ಕು ಕೂತು ಊಟವನ್ನು ಮಾಡುತ್ತಿದ್ದೆನು. ಇನ್ನೇನು ಊಟ ಮುಗಿಸುವ ಸಮಯ. ನಮ್ಮ ಮನೆಯ ಕೆಂಚ (ನಾಯಿ) ಜೋರಾಗಿ ಬೊಗಳಲು ಪ್ರಾರಂಭಿಸಿದ. ನಾನು ಊಟಕ್ಕೆ ಕುಳಿತಿದ್ದರೂ ಅವನು ಇಷ್ಟು ಜೋರಾಗಿ ಬೊಗಳುವುದನ್ನು ಸಹಿಸಿಕೊಳ್ಳಲಾಗದಷ್ಟು ಶಬ್ದಮಾಡುತ್ತಿದ್ದ. ಊಟ ಮುಗಿಸಿದವನೆ ಹೊರ ನಡೆದು "ಅಚ, ಅಚ, ಅಲ್ಲಿ ಯಾರವರೇ ಅಂತ ಈ ರೀತಿ ಬೊಗಳುತ್ತಿದ್ದೀಯಾ. ಕಿವಿಗಳೆರಡು ಮರಗಟ್ಟಿ ಹೋಯ್ತು" ಎಂದು ಶಪಿಸುತ್ತಾ ಕೆಂಚನ ಕಡೆಗೆ ತೆರಳಿದೆನು. ಅದೇ ಸಮಯಕ್ಕೆ ನಮ್ಮ ಹರೀಶನು (ಅಳಿಯ) ಸಹ ಕೆಂಚನ ಅಬ್ಬರ ತಾಳಲಾರದೆ ಪರೀಕ್ಷೆಗೆ ಓದಿಕೊಳ್ಳುತ್ತಿದ್ದವನು ಪುಸ್ತಕ ಮಡಿಚಿಟ್ಟು ಹೊರ ಬಂದನು. ಇಬ್ಬರು ನಾಯಿಯನ್ನು ಅಬ್ಬರಿಸುತ್ತಾ ಮುಂದಾದೆವು. ಆದರೆ ನಮ್ಮ ಕೆಂಚ ಮಾತ್ರ ನಮ್ಮ ಅಬ್ಬರಕ್ಕೆ ಕಿವಿಗೊಡದೆ ತನ್ನ ಸಂಗೀತವನ್ನು ಮುಂದುವರಿಸಿದ್ದ.



ನಮ್ಮ ದೃಷ್ಟಿ ಕೆಂಚನ ಮುಂದಿನ ಎಂಟ್ವತ್ತಡಿ ದೂರದಲ್ಲಿ ನೆಟ್ಟಿತು. ಯಾಕೆ ಕೆಂಚ ಈ ಪಾಟಿ ಬೊಗಳುತ್ತಿದ್ದಾನೆಂದು ಅರ್ಥವಾಗಿದ್ದು ಆಗ. ಕೆಂಚನ ಬೊಗಳಿಕೆಗೆ ಏನು ಪ್ರತಿಕ್ರಿಯೆ ನೀಡದೆ ಕಪ್ಪು ಮೈಬಣ್ಣದ ಮೇಲೆ ಮಧ್ಯೆ ಮಧ್ಯೆ ಪಟ್ಟೆ ಇರುವ ಹಾವೊಂದು, ಯಾರ ಹಂಗಿಲ್ಲದೆ ತನ್ನದೇ ದಾರಿ ಎಂಬಂತೆ ಗರ್ವದಿಂದ ತೆವಳಿಕೊಂಡು ಬರುತ್ತಿತ್ತು. ನಾವು




ಹಾವನ್ನು ನೋಡಿದ ಮೇಲೆ ಕೆಂಚನು ತನ್ನ ಕೆಲಸ ಮುಗಿಸಿದವನಂತೆ ನಿಧಾನವಾಗಿ ಬೊಗಳುತ್ತಾ ಸ್ತಬ್ಧನಾದನು. "ಹರೀಶ, ಇದು ಕಟ್ಟಾವಿನ ತರ ಇದೆ. ಇದರ ಮುಂದೆ ಹೋಗಬೇಡ. ಅದು ಹುಲ್ಲಿನ್ಲ್ಲೆ ಮೇಲೆ ಬರುತ್ತಾ ಇದೆ. ನಾವು ಈಗ ಅದನ್ನು ಗೇಟ್ ಕಡೆ ಬರದಂತೆ ಮಾಡಬೇಕು" ಎಂದು ನಾಲ್ಕು ಅಡಿ ದೂರದಲ್ಲಿದ್ದ ಗೇಟಿನ ಹತ್ತಿರ ನಿಂತು ಪಿಸು ಮಾತಿನಲ್ಲಿ ತಿಳಿಸಿದೆ. ಈ ಪಿಸು ಮಾತು ಹೇಳಿದ್ದು ಹಾವಿಗೆ ಕೇಳಿಸದಿರಲಿ ಎಂದಲ್ಲ. ನಮ್ಮಪ್ಪನ ಕಿವಿಗೆ ಬೀಳದಿರಲಿ ಎಂದು. ಈ ಹಾವು ಇರುವುದು ಅವರಿಗೆ ಗೊತ್ತಾದರೆ ಅದರ ಮರಣ ಖಚಿತ.

ಹಾವು ಮನೆಯ ಗೇಟ್ ಕಡೆಗೆ ಬರದಂತೆ ನಾವಿಬ್ಬರು ಅನೇಕ ತಂತ್ರಗಳನ್ನು ಮಾಡಲು ಪ್ರಾರಂಭಿಸಿದೆವು. ಆದರೆ ಈ ಹಾವು ವಿಷಕಾರಿ ಎಂದು ತಿಳಿದಿದ್ದರೂ ನಮಗೆ ಹಾವಿನ ಉಳಿವಿನ ಜೊತೆ ನಮ್ಮ ಅಳಿವು- ಉಳಿವಿನ ಪ್ರಶ್ನೆಯೂ ಕಾಡತೊಡಗಿತು. ನಮಗೆ ಪರಿವೇ ಇಲ್ಲದಂತಾಗಿ ನಮ್ಮ ಬಾಯಿಂದ ಕೆಲ ಶಬ್ದಗಳು ಬರತೊಡಗಿದವು. "ಶು, ಶು ಈ ಕಡೆ ಬರಬೇಡ, ಬಂದ್ರೆ ತಿಥಿ" ಎನ್ನುತ್ತಾ ಕಾಲನ್ನು ನೆಲಕ್ಕೆ ಬಡಿಯುತ್ತಾ ಶಬ್ದ ಮಾಡುತ್ತಿದ್ದೆವು. ನಮ್ಮಿಬ್ಬರ ಈ ಸರ್ಕಸ್ ನಮ್ಮಮ್ಮನ ಕಣ್ಣಿಗೆ ಬೀಳದಂತೆ ನಡೆಸಬೇಕಾದ ಅನಿವಾರ್ಯತೆ ಒದಗಿತ್ತು. ಏಕೆಂದರೆ ಎರಡು ಘಟನೆಗಳಿಂದಾಗಿ ನಮ್ಮ ಅಮ್ಮನಿಗೆ ಹಾವಿನ ಬಗ್ಗೆ ಅತಿಯಾದ ಭಯವು ಉಂಟಾಗಿ ಘಾಸಿಗೊಂಡಿದ್ದರು.

ಒಮ್ಮೆ ನಮ್ಮೊಲದ ಬದುವಿನಲ್ಲಿ ಅಮ್ಮನಿಗೆ ಹಾವು ಕಚ್ಚಿತ್ತು. ದುರಾದೃಷ್ಟಕ್ಕೆ ನಾವ್ಯಾರು ಆ ದಿನ ಮನೆಯಲ್ಲಿರಲಿಲ್ಲ. ಆಗ ನಮ್ಮಮ್ಮ ಹತ್ತಿರದಲ್ಲಿದ್ದ ಮನೆಯವರ ಸಹಾಯ ಪಡೆದುಕೊಂಡು ಕೆಂಚಗಾನಹಳ್ಳಿಯ ನಾಟಿ ವೈದ್ಯರ ಹತ್ತಿರ ಹೋಗಿ ಔಷಧಿ




ತಿಂದು ಬಂದಿದ್ದರು. ಕಚ್ಚಿದ್ದು ಯಾವ ಹಾವು ಅಂತಾನೂ ಗೊತ್ತಾಗಲಿಲ್ಲ. ಅದೃಷ್ಟಕ್ಕೆ ಯಾವುದೇ ತರಹದ ತೊಂದರೆ ಅಮ್ಮನಿಗೆ ಆಗಲಿಲ್ಲ. ಕಚ್ಚಿದ ಹಾವು ವಿಷರಹಿತವಿರಬಹುದು. ಹಾವುಗಳಲ್ಲಿ ವಿಷರಹಿತ ಅಥವಾ ವಿಷಪೂರಿತ ಯಾವುದೇ ಹಾವು ಕಚ್ಚಿದರೂ ನಾಟಿ ಔಷಧಕ್ಕಿಂತ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಯಬೇಕೆಂಬುದು ನನ್ನ ಸಲಹೆ.

ಇನ್ನೊಂದು ಘಟನೆ. ನಾನು 9ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದೆ. ಆಗ ನಾನು, ನನ್ನ ತಮ್ಮ, ಅಪ್ಪ-ಅಮ್ಮನೊಂದಿಗೆ ಚಿಕ್ಕದಾದ ಮನೆಯಲ್ಲಿ ವಾಸಿಸುತ್ತಿದ್ದೆವು. ಮನೆಯ ವ್ಯಾಪ್ತಿ ಚಿಕ್ಕದಾಗಿದ್ದು, ಕೊನೆಯಲ್ಲಿ ಅಡುಗೆಮನೆಯಿದ್ದು, ಅದಕ್ಕೆ ಅಂಟಿಕೊಂಡಂತೆ ತೆರೆದ ಬಾಗಿಲಿನ ಒಂದು ಕೊಠಡಿ, ಅದರ ಮುಂದೆ ಪಡಸಾಲೆ ಜೊತೆ ದನದ ಕೊಟ್ಟಿಗೆಯಿಂದ ಕೊನೆಗೊಂಡಿತು. ನಮ್ಮ ಮನೆಯ ಅಡುಗೆಮನೆ ಮತ್ತು ಪಡಸಾಲೆಯ ಮಧ್ಯೆ ಇದ್ದ ಸರ್ವೋಪಯೋಗಿ ಕೊಠಡಿ ನಾವು ಓದಿಕೊಳ್ಳುತ್ತಿದ್ದ ಸ್ಥಳ. ಜೊತೆಗೆ ಈ ಕೊಠಡಿಯಲ್ಲಿ ನಮ್ಮ ಪುಸ್ತಕಗಳನ್ನು ಒಂದು ಗೋಡೆಯೊಳಗಿನ ಒಂದು ಗೂಡಿನಲ್ಲಿ ಪೇರಿಸಿಟ್ಟುಕೊಳ್ಳಲಾಗಿತ್ತು. ಅದೇ ಕೊಠಡಿಯಲ್ಲಿ ದೇವರ ಫೋಟೋಗಳು, ದವಸ-ಧಾನ್ಯ ತುಂಬಿಟ್ಟುಕೊಳ್ಳಲು ಮಣ್ಣಿನಿಂದ ಮಾಡಿದ ವಾಡೇವು, ಬುಡ್ಡು ಮತ್ತು ಕರಿಬಾನೆಗಳನ್ನು ಜೋಡಿಸಲಾಗಿತ್ತು. ಒಂದು ದಿನ ನಾವೆಲ್ಲರೂ ರಾತ್ರಿಯ ಊಟ ಮುಗಿಸಿದ್ದೆವು. ಪ್ರತಿದಿನ ನಾನು ರಾತ್ರಿ 11 ಗಂಟೆಗಳವರೆಗೆ ಓದಿಕೊಳ್ಳುತ್ತಿದ್ದೆ. ಆ ರಾತ್ರಿ ಓದಲು ಆಸಕ್ತಿ ಇಲ್ಲದೆ ಪಠ್ಯಪುಸ್ತಕಗಳನ್ನು ಮತ್ತು ನೋಟ್ಸ್ ಗಳನ್ನೆಲ್ಲ ಎತ್ತಿಡಲು ಪುಸ್ತಕದ ಗೂಡಿನ ಕಡೆಗೆ ಹೋಗುತ್ತಿದ್ದೆನು. ಪುಸ್ತಕಗಳನ್ನೆಲ್ಲಾ ಗೂಡಿಗೆ ಸೇರಿಸಿದೆ. ಜಂತೆಯ ಕಡೆ ಏನೋ ಆಕರ್ಷಿಸಿದಂತೆ 60 ವೋಲ್ಟ್ ಬಲ್ಬಿನ ಬೆಳಕಿನಲ್ಲಿ ಗೋಚರಿಸಿತು. ಜಂತೆ ಮನೆಯ ಮಾಳಿಗೆಗೆ ಅಡ್ಡೆಗಳನ್ನು ಹಾಕಿ ಅದಕ್ಕೆ ತೆಂಗಿನ ಮರದ ಪಟ್ಟಿಗಳನ್ನಿಟ್ಟು, ಪಟ್ಟಿಗಳ ಮೇಲೆ ಇಟ್ಟಿಗೆಯನ್ನು ಜೋಡಿಸಿ ಅದರ ಮೇಲೆ ಮಣ್ಣನ್ನು ಹಾಕಲಾಗಿತ್ತು. ಪ್ರತೀ ವರ್ಷ ಮಳೆಗಾಲದಲ್ಲಿ ಮಾಳಿಗೆ ಸೋರುತ್ತಿದ್ದರಿಂದ ನಾಲ್ಕೈದು ಕಿಲೋ ಮೀಟರ್ ದೂರದಲ್ಲಿದ್ದ ಕಟ್ಟೆಯೊಂದರ ಕರಲು ಮಣ್ಣನ್ನು ಎತ್ತಿನ ಗಾಡಿಯಲ್ಲಿ ತಂದು ಹಾಕುತ್ತಿದ್ದರು. ನನ್ನ ದೃಷ್ಟಿ ಈಗ ನಮ್ಮನೆಯ ಜಂತೆಯ ಕಡೆ ಸೆಳೆಯಿತು. ಜಂತೆಯ ಇಟ್ಟಿಗೆಗಳ ಮಧ್ಯೆ ಕಪ್ಪನೆಯ ಬಾಲವೊಂದು ನೇತಾಡುತ್ತಿತ್ತು. ಯಾವುದೋ ಇಲಿಯ ಬಾಲವಿರಬಹುದು ಎಂದು ಸುಮ್ಮನಾದೆ. ಕೆಲ ನಿಮಿಷಗಳ ನಂತರ ಬಾಲ ಚಲಿಸಿದಂತಾಗಿ ಕುತೂಹಲದಿಂದ ಇನ್ನೂ ಹತ್ತಿರ ಹೋಗಿ ತಲೆ ಮೇಲೆತ್ತಿ ಜಂತೆಯನ್ನು ನೋಡಿದೆ. ಉದ್ದನೆಯ ಹಾವಿನ ಚಹರೆಗಳು ಕಾಣತೊಡಗಿದವು. ಮೈಬಣ್ಣ ಕಪ್ಪು ಬಣ್ಣದಿಂದ ಕೂಡಿದ್ದರೂ ಮಧ್ಯೆ ಮಧ್ಯೆ ಬಿಳಿ ಪಟ್ಟೆಗಳಿದ್ದ ಹಾವು ನಾಲಿಗೆಯನ್ನು ಹೊರಹಾಕಿ ಜಂತೆಯಲ್ಲಿ ಅಡಗಿದ್ದ ಇಲಿಗಳಿಗಾಗಿ ಹುಡುಕಾಟ ನಡೆಸುತ್ತಿತ್ತು. ನಮ್ಮಪ್ಪನಿಗೆ ಹೇಳುವಷ್ಟರಲ್ಲಿ ಹಾವು ಅದರ ಜಾಗವನ್ನು ಬದಲಿಸಿ ಇಟ್ಟಿಗೆಯ ಸಂದಿಯಲ್ಲಿ ತೂರಿ ಇನ್ನೊಂದು ಅಡ್ಡೆಯ ಪಕ್ಕದಲ್ಲಿದ್ದ ಇಟ್ಟಿಗೆ ಸಂದಿಯನ್ನು ಸೇರಿತು. ಎಲ್ಲರಿಗೂ






ನಿದ್ದೆಯ ಬದಲಿಗೆ ಭಯ ಪ್ರಾರಂಭವಾಯಿತು. ಹಾವನ್ನು ಹೊಡೆದು ಹಾಕದಿದ್ದರೆ ನಾವು ಮಲಗಿದ್ದಾಗ ಬಂದು ಕಚ್ಚಿದರೆ ಏನು ಮಾಡೋದು!? ಎಂಬ ಚಡಪಡಿಕೆ ನಮ್ಮಪ್ಪನಿಗೆ ಶುರುವಾಯಿತು. "ಹಾವು ಜಂತೆಯಲ್ಲಿ ಇರುವುದರಿಂದ ಸಾಯಿಸುವುದು ಸುಲಭವಲ್ಲ. ಸುಮ್ಮನೆ ಗಾಬರಿ ಮಾಡಿದರೆ ತಪ್ಪಿಸಿಕೊಂಡು ಬಿಟ್ಟರೆ ಕಷ್ಟ" ಎಂದು ಹೇಳಿದರು.




ಕೆಲ ನಿಮಿಷಗಳ ನಂತರ ಹಾವಿನ ಚಲನೆ ಮುಂದುವರೆದು ಇಟ್ಟಿಗೆಯ ಸಂಧಿಯಲ್ಲಿ ಸ್ಥಿರವಾಗಿಬಿಟ್ಟಿತು. ನಮ್ಮಪ್ಪ ನಮ್ಮ ಕಡೆ ನೋಡುತ್ತಾ "ಕರೆಹನುಮಣ್ಣರ ಹನುಮಂತರಾಯಿ ಮನೆ ಹತ್ರ ಹೋಗಿ ಭರ್ಜಿಯನ್ನು ತೆಗೆದುಕೊಂಡು, ಅವನನ್ನೂ ಕರ್ಕೊಂಡು ಬೇಗ ಬಾ" ಎಂದು ಹೇಳಿದರು. ಅದರಂತೆ ಕಡುಗತ್ತಲಲ್ಲಿ ಊರಿನ ಕೊನೆಯಲ್ಲಿದ್ದ ಅವರ ಮನೆಗೆ ಹೋಗಿ ಭರ್ಜಿ ಸಮೇತ ಬಹುಬೇಗ ಕರೆದುಕೊಂಡು ಬಂದೆವು. ತಂದ ಭರ್ಜಿಯಿಂದ ತಲೆಗೆ ಹಾಕಿದರೂ ಸಹ ಅದರಿಂದ ತಪ್ಪಿಸಿಕೊಳ್ಳಲು ಜಂತೆಯಲ್ಲೇ ಹಿಂದೆ ಮುಂದೆ ಸರಿಯುತ್ತಿತ್ತು. ಕೊನೆಗೆ ಅರ್ಧ ಇಟ್ಟಿಗೆಯನ್ನು ತೆಗೆದುಹಾಕಿ ಅದನ್ನು ಸಾಯಿಸಲು ಮುಂದಾದರು. ಇವರು ಏನೇ ಮಾಡಿದರೂ ತಲೆಗೆ ಸ್ವಲ್ಪ ಗಾಯವಾಗಿದ್ದು ಬಿಟ್ಟರೆ ಹಾವಿನ ದೇಹಕ್ಕೆ ಭರ್ಜಿ ತಾಗುತ್ತಿರಲಿಲ್ಲ. ಅರ್ಧ ಗಂಟೆಯ ಪ್ರಯತ್ನಗಳೆಲ್ಲಾ ವಿಫಲವಾಗಿ ಹೋಯಿತು. ಆದರೆ ಹಾವು ಮಾತ್ರ ಜಂತೆಯ ಕೊನೆಯಲ್ಲಿದ್ದ ಬಿಲದೊಳಗೆ ಸೇರಿಕೊಂಡಿತು. ಈಗ ಆ ಹಾವನ್ನು ಹಿಡಿಯಬೇಕೆಂದರೆ ಮಾಳಿಗೆಯನ್ನು ಕೀಳಬೇಕಾದ ಪರಿಸ್ಥಿತಿ ಉಂಟಾಯಿತು. ಅಂತಹ ದುಸ್ಸಾಹಸಕ್ಕೆ ಕೈ ಹಾಕುವುದು ಬೇಡವೆಂದು ನಮ್ಮಪ್ಪ ತೀರ್ಮಾನಿಸಿದರು. ಆದರೆ ಈ ರಾತ್ರಿ ನಿದ್ದೆ ಬರುವುದಾದರೂ ಉಂಟೇ!?. ನಮ್ಮನ್ನು ಮಲಗಿಸಿ ಅರ್ಧ ಹೊತ್ತಿನ ತನಕ ನಮ್ಮಮ್ಮ ಎದ್ದು ಕುಳಿತುಕೊಂಡೇ ಬೆಳಗಿನ ಜಾವದವರೆಗೆ ತೂಕಡಿಸಿಕೊಂಡು ನಿದ್ದೆ ಮಾಡಿ ಬೆಳಕರಿಸಿದರು. ಒಂದು ವಾರದ ಕಾಲ ಮನೆಯಲ್ಲಿ ಭಯದ ವಾತಾವರಣವಿದ್ದರೂ ಹಾವು ತನ್ನ ಜೀವ ಉಳಿಸಿಕೊಂಡರೆ ಸಾಕೆಂದು ಅಲ್ಲಿಂದ ಜಾಗ ಖಾಲಿ ಮಾಡಿರಬೇಕೆಂದು ನನಗನಿಸಿತು. ಈ ಜಂತೆಯಲ್ಲಿದ್ದ ಹಾವೂ ಸಹ ಕಟ್ಟಾವಿನ ರೀತಿ ಇದ್ದರೂ ಹಾವಿನ ಬಗ್ಗೆ ನನಗೆ ಹೆಚ್ಚಿನ ಮಾಹಿತಿಯಿಲ್ಲದ ಕಾರಣ ನಿಖರವಾಗಿ ಕಟ್ಟಾವೇ ಎಂದು ಹೇಳಲು ಸಾಧ್ಯವಾಗಲಿಲ್ಲ. ಅದಿರಲಿ ಬಿಡಿ ಇದು ಮುಗಿದು ಹೋದ ಕಥೆ.




© ವಿವೇಕ್ ಶರ್ಮ

ಈಗ ನಮ್ಮ ಅಂಗಳದಲ್ಲಿರುವ ಕಟ್ಟಾವನ್ನು ಬಚಾವ್ ಮಾಡುವ ತುರ್ತಿದೆ. ಹರೀಶ್ ಮತ್ತು ನಾನು ಮತ್ತದೇ ಗೇಟ್ ಕಡೆ ಬರುತ್ತಿದ್ದ ಹಾವಿನ ದಾರಿ ತಪ್ಪಿಸಲು ಸರ್ಕಸ್ ಮುಂದುವರಿಸುತ್ತಿದ್ದೆವು. ನಮ್ಮಿಬ್ಬರ ಕಷ್ಟವನ್ನು ಅದು ಅರ್ಥ ಮಾಡಿಕೊಂಡಿರಬಹುದೆನೋ! ತಕ್ಷಣವೇ ಅದರ ದಿಕ್ಕನ್ನು ಬದಲಾಯಿಸಿ ಗೇಟ್ ಕಡೆ ಬರುವ ಬದಲು ಸಿಮೆಂಟ್ ಕಣದಿಂದ ಇಳಿದು ಹುಲ್ಲಿನ ಮೇಲೆ ಹೋಗಲು ಪ್ರಾರಂಭಿಸಿತು. ನಾವು ಅಂಗಳದ ಸಿಮೆಂಟ್ ಮೇಲೆ ಹಾವು ಬರದಂತೆ ಮಾಡಲು ಚಡಪಡಿಸುತ್ತಿದ್ದೆವು. ಕೆಲವು ನಿಮಿಷಗಳ ನಂತರ ನಮ್ಮ ಅಮ್ಮ ನಮ್ಮಿಬ್ಬರ ಕಡೆ ಧಾವಿಸಿ ನಮ್ಮ ಹಾವಭಾವ ಗಮನಿಸಿದ್ದರಿಂದ ನಾವು ಈ ಕಟ್ಟಾವು ಇರುವ ಬಗ್ಗೆ ಹೇಳಲೇಬೇಕಾಯಿತು. ನೀರಿನ ತೊಟ್ಟಿಯ ಹತ್ತಿರ ತನ್ನ ಪಾಡಿಗೆ ತಾನು ಪಯಣ ಮುಂದುವರಿಸುತ್ತಿತ್ತು. ನಮ್ಮಮ್ಮನೂ ಸಹ ಕುತೂಹಲದಿಂದ "ಎಂತಹ ಹಾವದು? ನೀವು ಹತ್ತಿರ ಹೋಗಬೇಡಿ. ನಿಮ್ಮಪ್ಪನನ್ನು ಎಬ್ಬಿಸುತ್ತೀನಿ ಇರು" ಎಂದು ಹೇಳಿ ದನದ ಕೊಟ್ಟಿಗೆಯ ಹತ್ತಿರ ಮಲಗಿದ್ದ ನಮ್ಮಪ್ಪನನ್ನು ಎಬ್ಬಿಸಲು ಮುಂದಾದರು. ಕೆಲವೇ ಸೆಕೆಂಡುಗಳಲ್ಲಿ ನಾವು ಯಾಮಾರಿದರೂ ಹಾವನ್ನು ಸಾಯಿಸಿ ಬಿಡುತ್ತಾರೆಂದು ನಮ್ಮ ಮೆದುಳು ಶರವೇಗದಲ್ಲಿ ಕಾರ್ಯನಿರತವಾಯಿತು. ಅಪ್ಪನನ್ನು ಎಬ್ಬಿಸಲು ಹೋಗುತ್ತಿದ್ದ ಅಮ್ಮನನ್ನು ತಡೆದು "ಹೇಳಬೇಡಮ್ಮ, ಅದು ಈ ಕಡೆ ಬರಲ್ಲ. ಅದರ ಪಾಡಿಗೆ ಅದು ಹೋಗುತ್ತದೆ. ಈ ಕಡೆ ಬರದಂತೆ ನಾವು ನೋಡಿಕೊಳ್ಳುತ್ತಿರುತ್ತೇವೆ. ಪಾಪ ಅದರ ಪಾಡಿಗೆ ಅದನ್ನು ಬಿಟ್ಟುಬಿಡು" ಎಂದು ಹೇಳಿದೆವು. ಕೊನೆಗೆ ನಮ್ಮಮ್ಮ ನಮ್ಮ ಮನವಿಯನ್ನು ಒಲ್ಲದ ಮನಸ್ಸಿನಿಂದ ಸ್ವೀಕರಿಸಿ ಕಟ್ಟು ಹಾವಿನ ದೇಹ ಸೌಂದರ್ಯ ವೀಕ್ಷಿಸಲು ನಮ್ಮೊಂದಿಗೆ ಜೊತೆಯಾದರು.


© ರಾಘವೇಂದ್ರ

ನಮ್ಮ ಮೂವರ ಚಿತ್ತ ಉರಗನತ್ತ ನೆಟ್ಟು ಸುಮ್ಮನೆ ಅದರ ಪಯಣವನ್ನು ನೋಡುತ್ತಾ ನಿಂತೆವು. ಕೊನೆಗೂ ಹಾವು ನಮ್ಮ ಹೊರಗಿನ ಕೊಟ್ಟಿಗೆಯ ಗೊಂತನ್ನು ದಾಟಿ ಮನೆಯ ಪಕ್ಕದಲ್ಲಿದ್ದ ಎತ್ತಿನ ಗಾಡಿಯ ಸಮೀಪವಾಗಿ ಮನೆ ಹಿಂದಿನ ಕರಿಬೇವಿನ ಗಿಡಕ್ಕೆ ಹಾಕಿದ್ದ ಹೊದಿಕೆಯಲ್ಲಿ ಲೀನವಾಯಿತು. ಮೂವರು ನಿಟ್ಟುಸಿರು ಬಿಡುತ್ತಾ, ಬೆಳಿಗ್ಗೆ ಆ ಕಡೆ ಹೋಗುವುದು ಬೇಡ ಎಂಬ ಷರತ್ತಿನೊಂದಿಗೆ ಹಾವಿನ ಬಗ್ಗೆ ಚರ್ಚೆ ಮುಂದುವರೆಯಿತು. ಕಪ್ಪುಗಿನ ಮೈಬಣ್ಣ ಹೊಂದಿರುವ ದೇಹವಿದ್ದರೂ ಮಧ್ಯೆ ಮಧ್ಯೆ ಬಿಳಿ ಪಟ್ಟಿಗಳು ಇದ್ದ ಕಾರಣ ನಮ್ಮಮ್ಮ ಇದು ಕಟ್ಟಾವು ಎಂದು ಹೇಳಿ ಮಲಗಲು ಹೊರಟು ಹೋದರು. ನಮ್ಮಿಬ್ಬರಿಗೆ ಈ ಹಾವಿನ ಬಗ್ಗೆ ಹೆಚ್ಚು ತಿಳಿಯುವ ಕುತೂಹಲ ಮೊಳಕೆಯೊಡೆಯಿತು. ಹಾವುಗಳ ಬಗ್ಗೆ ಅನೇಕ ಪುಸ್ತಕಗಳಲ್ಲಿ ಓದಿದಂತೆ, ಕಾರ್ಯಗಾರಗಳಲ್ಲಿ ಕೇಳಿಸಿಕೊಂಡಂತೆ ನಾವು ನೋಡಿದ ಹಾವು ಸೈಲೆಂಟ್ ಕಿಲ್ಲರ್ ಎಂದು ಸಹ ಹೇಳುತ್ತಿದ್ದರು. ಏಕೆಂದರೆ ಈ ನಾಮಧೇಯದಿಂದ ಕರೆಯಲು ಕಾರಣವೇನು ಎಂದು ತಿಳಿಯಲು ಮುಂದಾದೆನು. ಗುರುರಾಜ್ ಸನಿಲ್ ರವರು ಬರೆದಿದ್ದ "ಹಾವು ನಾವು" ಪುಸ್ತಕವು ನನ್ನಲ್ಲಿತ್ತು. ನಾನು ನೋಡಿದ ಕಟ್ಟಾವಿನ ಬಗ್ಗೆ ಆ ಪುಸ್ತಕದಲ್ಲಿದ್ದ ಮಾಹಿತಿಗಳನ್ನು ಓದಲು ಪ್ರಾರಂಭಿಸಿದೆನು.

ಕಟ್ಟಾವು ಮಧ್ಯಮ ಗಾತ್ರದ ಶರೀರ, ಹೊಳೆಯುವ ನಯವಾದ ಶರೀರದ ಪೊರೆಯ ಹುರುಪೆಗಳು, ದುಂಡಗಿನ ತಲೆಯನ್ನು ಹೊಂದಿರುತ್ತವೆ. ಈ ಹಾವುಗಳ ಮೇಲ್ತುಟಿಯ ಅಂಚು ಮತ್ತು ಕೆಳತುಟಿಯು ಬಿಳುಪಾಗಿರುತ್ತದೆ. ಸಣ್ಣ ಕಣ್ಣುಗಳು, ವೃತ್ತಾಕಾರದ ಪಾಪೆಯನ್ನು ಹೊಂದಿವೆ. ಶರೀರ ಬಣ್ಣವು ನೀಲಿ ಮಿಶ್ರಿತ ಕಪ್ಪು ಅಥವಾ ಮಂದಗಪ್ಪು ಬಣ್ಣದಿಂದ ಕೂಡಿದೆ. ಪೊರೆಯ ಹುರುಪೆಗಳು ಷಡ್ಭುಜಾಕೃತಿಯಲ್ಲಿವೆ. ಉದರ ಫಲಕಗಳು ಬಿಳುಪಾಗಿದ್ದು ಅಗಲವಾಗಿರುತ್ತವೆ. ನೀಲಿ ಮಿಶ್ರಿತ ಕಪ್ಪು ಬಣ್ಣದ ಶರೀರದ ಮೇಲೆ ತೆಳು ಬಿಳುಪಿನ




ಹಲವಾರು ಜೋಡಿ ಅಡ್ಡ ಕಟ್ಟುಗಳಿದ್ದು, ಅವು ಹಾವಿನ ತಲೆಯಿಂದ ಆರು-ಎಂಟು ಇಂಚುಗಳ ನಂತರ ಆರಂಭವಾಗಿ ಬಾಲದ ಕೊನೆಯವರೆಗೂ ಇರುತ್ತವೆ. ಈ ಕಟ್ಟುಗಳು ಸುಮಾರು 38 ರಿಂದ 60ರ ವರೆಗಿರುತ್ತವೆ. ಮರಿ ಹಾವುಗಳಲ್ಲಿ ಈ ಕಟ್ಟುಗಳು ಹೆಚ್ಚಾಗಿ ತಲೆಯಿಂದಲೇ ಆರಂಭವಾಗಿ ಬಾಲದ ತುದಿಯವರೆಗಿದ್ದು ಅವು ಬೆಳೆದಂತೆ ತಲೆ ಮತ್ತು ಕುತ್ತಿಗೆಯ ಕಟ್ಟುಗಳು ಮಾಸುತ್ತವೆ. ಇವುಗಳ ನಾಲಿಗೆಯು ಗುಲಾಬಿ ಮಿಶ್ರಿತ ಕೆಂಪು ಬಣ್ಣದಿಂದ ಕೂಡಿದೆ. ಗರಿಷ್ಠ 150 ಸೆಂ. ಮೀ ಉದ್ದ ಬೆಳೆಯಬಲ್ಲ ಈ ಹಾವುಗಳಲ್ಲಿ ಗಂಡು ಹಾವುಗಳು ದೊಡ್ಡದಿರುತ್ತವೆ. ಮೊಟ್ಟೆಯಿಂದ ಹೊರಗೆ ಬಂದ ಮರಿಗಳು 25 ರಿಂದ 30 ಸೆಂಟಿ ಮೀಟರ್ ಉದ್ದ ಇರುತ್ತವೆ.

ಸಾಮಾನ್ಯವಾಗಿ ಜನವಸತಿಗಳ ಸುತ್ತಮುತ್ತ ಕಂಡುಬರುವ ಈ ಹಾವುಗಳು ಹಳೆಯ ಕಲ್ಲಿನ ರಾಶಿ, ಸುಂಡಿಲಿಗಳ ಬಿಲ, ಹುತ್ತ, ಕೊಳೆತ ಮರದ ಪೊಟರೆ, ಹೊಲಗದ್ದೆಗಳ ಇಲಿಯ ಬಿಲಗಳಲ್ಲಿ ವಾಸಿಸುತ್ತವೆ. ಹೆಚ್ಚು ನೀರಿನ ಆಸರೆ ಇರುವಲ್ಲಿ ಕಂಡುಬರುತ್ತವೆ. ರಾತ್ರಿ ಸಂಚಾರಿಗಳಾದ ಇವು ಹೆಚ್ಚಾಗಿ ಏಕಾಂಗಿಯಾಗಿ ವಾಸಿಸುತ್ತವೆ; ಜೋಡಿಯಾಗಿ ಕಾಣುವುದು ಸಂಭೋಗಕಾಲದಲ್ಲಿ ಮಾತ್ರ. ಬೆದರಿದಾಗ ತಲೆಯನ್ನು ದೇಹದ ಕೆಳಗೆ ಮರೆಮಾಡಿಕೊಂಡು ರಕ್ಷಣೆಯ ಭಂಗಿಯನ್ನು ತೋರುತ್ತದೆ.

ಈ ಕಟ್ಟು ಹಾವು ನಮ್ಮೆಲ್ಲರ ಸುತ್ತಮುತ್ತಲಿನ ಪರಿಸರದಲ್ಲಿ ಅಧಿಕ ಸಂಖ್ಯೆಯಲ್ಲಿದ್ದರೂ ಅವು ಆದಷ್ಟು ಗುಪ್ತವಾಗಿ ಬದುಕುವ ಕಾರಣ ಅವು ನಮಗೆ ಅಪರೂಪಕ್ಕೆ ಕಂಡು ಬರುತ್ತವೆ. ಇವುಗಳಲ್ಲಿ ಕಂಡುಬರುವ ಹೋರಾಟಗಳು ಸಾಮಾನ್ಯವಾಗಿ ಗಂಡು ಹಾವುಗಳ ಗಡಿಹೋರಾಟ (male combat) ಅಥವಾ ಮಿಲನಪೂರ್ವ ಕದನ (courtship interactions) ಆಗಿರಬಹುದು. ಈ ಹಾವುಗಳನ್ನು ಮಾನವರು ರಕ್ಷಣೆ ಮಾಡಲು ಹಿಡಿದಾಗ ಅವು ತಮ್ಮ ರಕ್ಷಣೆಯ ತಂತ್ರವಾಗಿ ಕೆಲವೊಮ್ಮೆ ಗುದದ್ವಾರದೊಳಗಿರುವ ವಾಸನಾಗ್ರಂಥಿಯಿಂದ (cloacal scent gland) ಒಂದು ಬಗೆಯ ದುರ್ವಾಸನೆಯಿಂದ ಕೂಡಿದ ರಾಸಾಯನಿಕವನ್ನು ಸ್ರವಿಸುತ್ತವೆ.

ಇವುಗಳು ತಮ್ಮ ನೈಸರ್ಗಿಕ ಪರಿಸರದಲ್ಲಿ ಸಾಮಾನ್ಯವಾಗಿ 10–17 ವರ್ಷಗಳವರೆಗೆ ಬದುಕಬಲ್ಲವು (ಬಂಧನದಲ್ಲಿ ಅಂದಾಜು 15–20 ವರ್ಷದವರೆಗೆ ಬದುಕುತ್ತವೆ). ಇವು ಮುಖ್ಯವಾಗಿ ಇತರ ಪ್ರಭೇದದ ವಿಷಪೂರಿತ ಮತ್ತು ವಿಷರಹಿತ ಹಾವುಗಳನ್ನೂ (ophiophagy) ತಿನ್ನುತ್ತವೆ. ಜೊತೆಗೆ ಇಲಿ, ಹಲ್ಲಿಗಳನ್ನು ಸಹ ತಿನ್ನುತ್ತವೆ. ಕೆಲವೊಮ್ಮೆ ಸ್ವಜಾತಿ ಭಕ್ಷಣೆ (cannibalism) ಕೂಡ ವರದಿಯಾಗಿದೆ, ಆದರೆ ಅದು ಅತ್ಯಂತ ಅಪರೂಪ.




ಈ ಹಾವುಗಳ ಸಂತಾನೋತ್ಪತ್ತಿ ಪ್ರಕ್ರಿಯೆಯು ಸಾಮಾನ್ಯವಾಗಿ ಡಿಸೆಂಬರ್–ಏಪ್ರಿಲ್ ತಿಂಗಳ ನಡುವೆ ನಡೆಯುತ್ತದೆ. ಜನವರಿ–ಫೆಬ್ರವರಿ ಸಮಯದಲ್ಲಿ ಸಂಭೋಗ ಕಂಡುಬರುತ್ತದೆ. ಹೆಣ್ಣು ಹಾವುಗಳು 6–15 ಮೊಟ್ಟೆಗಳನ್ನು ಇಡುತ್ತವೆ. ಮೊಟ್ಟೆಗಳಿಗೆ ಕಾವು ಕೊಡುವ ಅವಧಿ 60–70 ದಿನಗಳವರೆಗೆ ಇರುವುದರಿಂದ, ಮೇ–ಜೂನ್ ತಿಂಗಳಲ್ಲಿ ಮರಿಗಳು ಹೊರ ಬರುತ್ತವೆ. ಹುಟ್ಟಿದ ಮರಿಗಳು ಸರಾಸರಿ 25–30 ಸೆಂ. ಮೀ ಉದ್ದವಿದ್ದು, ಮೊದಲ ಎರಡು ವರ್ಷಗಳಲ್ಲಿ ತಮ್ಮ ಉದ್ದವನ್ನು ಮೂರು ಪಟ್ಟು ಹೆಚ್ಚಿಸಿಕೊಳ್ಳಬಲ್ಲವು.

ಭಾರತದ ವಿಷಯುಕ್ತ ಹಾವುಗಳಲ್ಲಿ ಕಟ್ಟು ಹಾವು ಸಹ ಒಂದು. ಇದನ್ನು ಭಾರತದ 'ಬಿಗ್ 4' ಪಟ್ಟಿಯಲ್ಲಿ ಸೇರಿಸಲಾಗಿದೆ. ಈ 'ಬಿಗ್ 4' ನಲ್ಲಿ ಇರುವ ಹಾವುಗಳಾದ ನಾಗರಹಾವು, ಕಟ್ಟು ಹಾವು, ಕೊಳಕ ಮಂಡಲ, ಗರಗಸ ಮಂಡಲದಿಂದಲೇ ಭಾರತದಲ್ಲಿ ಹೆಚ್ಚು ಸಾವು ಸಂಭವಿಸುತ್ತಿದೆ. ಇಂಗ್ಲಿಷ್ ನಲ್ಲಿ ಇದನ್ನು ಕಾಮನ್ ಕ್ರೈಟ್ (Common Krait) ಎಂಬ ಹೆಸರಿನಿಂದ ಕರೆದರೆ, ವೈಜ್ಞಾನಿಕವಾಗಿ ಬಂಗಾರಸ್ ಕೆರುಲಿಯಸ್ (Bungarus Caeruleus) ಎಂದು ಕರೆಯಲಾಗುತ್ತದೆ. ಕನ್ನಡದಲ್ಲಿ ಕಡಂಬಳ ಹಾವು ಎಂಬ ಹೆಸರೂ ಸಹ ಈ ಹಾವಿಗೆ ಇದೆ. ಆಡು ಭಾಷೆಯಲ್ಲಿ ಇದರ ದೇಹ ವಿನ್ಯಾಸದ ಆಧಾರದ ಮೇಲೆ ಕಟ್ಟು ಹಾವು ಎಂದು ಕರೆಯುತ್ತಾರೆ. ಈ ಹಾವು ಕಚ್ಚಿದಾಗ ಕೆಲವು ಬಾರಿ ನಮ್ಮ ಅರಿವಿಗೆ ಬರುವುದೇ ಇಲ್ಲ ಮತ್ತು ಸೊಳ್ಳೆ ಕಚ್ಚಿದಂತಾಗುತ್ತದೆ. ಹಾಗಾಗಿಯೇ ಇದನ್ನು ನಾನು 'ಸೈಲೆಂಟ್ ಕಿಲ್ಲರ್' ಎಂದು ಸಹ ಸಂಬೋಧಿಸುವುದು. ಕಡಂಬಳದ ಹಾವಿನ ವಿಷವು ನರಮಂಡಲದ ಮೇಲೆ ಪ್ರಭಾವ ಬೀರುವ (Neurotoxic) ಗುಣವನ್ನು ಹೊಂದಿದೆ. ಈ ಹಾವಿನ ಕಡಿತದಿಂದ ಶರೀರದಲ್ಲಿ ಪಾರ್ಶ್ವವಾಯುವಿನ ಲಕ್ಷಣಗಳು ಕಂಡುಬಂದು ಉಸಿರಾಟ ಸ್ಥಗಿತಗೊಂಡು ಸಾವು ಸಂಭವಿಸಬಹುದು. ಆದ್ದರಿಂದ ಇದರ ಕಡಿತಕ್ಕೊಳಗಾದಾಗ ಆದಷ್ಟು ಬೇಗ ಮತ್ತು ಸೂಕ್ತ ಚಿಕಿತ್ಸೆಯನ್ನು ಪಡೆದುಕೊಳ್ಳುವ ಅಗತ್ಯವಿದೆ.




ಸುಮಾರು 310 ಮಿಲಿಯನ್ ವರ್ಷಗಳ ಹಿಂದೆ ಸರಿಸೃಪಗಳು ಉಗಮಗೊಂಡವು. ಹಾವುಗಳು ಹಲ್ಲಿಗಳಂತಹ ಜೀವಿಗಳಿಂದ ವಿಕಾಸಗೊಂಡವು. ಪ್ರಪಂಚದಲ್ಲಿ ಪ್ರಸ್ತುತ ಸುಮಾರು 3,900-4000 ಪ್ರಭೇದದ ಹಾವುಗಳು ದಾಖಲಾಗಿವೆ. ಭಾರತದಲ್ಲಿ ಸುಮಾರು 300 ಪ್ರಭೇದದ ಹಾವುಗಳು ಪತ್ತೆಯಾಗಿದ್ದು, ಅವುಗಳಲ್ಲಿ ಸುಮಾರು 60 ಪ್ರಭೇದಗಳು ವಿಷಕಾರಿ. ಕರ್ನಾಟಕದಲ್ಲಿ 12–15 ವಿಷಕಾರಿ ಪ್ರಭೇದಗಳು ದೊರಕುತ್ತವೆ.

ಈ 12-15 ಪ್ರಭೇದದ ವಿಷಕಾರಿ ಹಾವುಗಳಲ್ಲಿ **ನಾಲ್ಕು ಪ್ರಭೇದಗಳು** — ಕಡಂಬಳ ಹಾವು (Common Krait, *Bungarus caeruleus*), ನಾಗರಹಾವು (Indian Cobra, *Naja naja*), ಕೊಳಕು ಮಂಡಲ (Russell's viper, *Daboia russelii*), ಮತ್ತು ಗರಗಸ ಮಂಡಲ (Saw scaled viper, *Echis carinatus*) — ಗ್ರಾಮೀಣ ಮತ್ತು ನಗರ ಪ್ರದೇಶಗಳಿಗೆ ಸಮೀಪವಿರುವ ವಾಸಸ್ಥಳಗಳಲ್ಲಿ ಸಾಮಾನ್ಯವಾಗಿ ವಾಸಿಸುತ್ತವೆ. ಹಾವುಗಳು ಜೀವವೈವಿಧ್ಯತೆಯ ಪ್ರಮುಖ ಅಂಗವಾಗಿದ್ದು, ಆಹಾರ ಸರಪಳಿಯನ್ನು ಸಮತೋಲನದಲ್ಲಿಡುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಹಾವುಗಳು ಇಲಿಗಳ ನಿಯಂತ್ರಣ ಮಾಡುವುದರಲ್ಲಿ ಮುಂಚೂಣಿಯಲ್ಲಿರುತ್ತವೆ. ಹಾವುಗಳ ಇರುವಿಕೆಯಿಂದ ರೈತರ ಹೊಲಮನೆಗಳಲ್ಲಿ ಇಲಿಗಳ ಪಾಲಾಗುವ ಆಹಾರ ಪದಾರ್ಥಗಳು ವ್ಯರ್ಥವಾಗುವುದು ಸ್ವಾಭಾವಿಕವಾಗಿ ಕಡಿಮೆಯಾಗುತ್ತದೆ. ಹಾಗಾಗಿ ಅವುಗಳಿಗೆ ತೊಂದರೆ ಮಾಡದೆ, ನಾವು ಎಚ್ಚರಿಕೆಯಿಂದ ಬದುಕುವುದೂ ಸಹ ಪರಿಸರ ಸಂರಕ್ಷಣೆಯ ಒಂದು ಪ್ರಮುಖ ಭಾಗವೆಂದು ಹೇಳಬಹುದು.

ಅಂದು ನಾವು 'ಸೈಲೆಂಟ್ ಕಿಲ್ಲರ್' ಆದ ಕಟ್ಟು ಹಾವನ್ನು ನಮ್ಮ ಅಂಗಳದಿಂದ ಅಪ್ಪನಿಗೆ ಗೊತ್ತಿಲ್ಲದಂತೆ ಸೈಲೆಂಟಾಗಿ ಬಚಾವ್ ಮಾಡಿದ್ದಂತೂ ನಮಗೆ ಸಂತಸದ ಕ್ಷಣಗಳಾಗಿದ್ದವು. ಆದರೆ ಅದು ಬೇರೊಬ್ಬರ ಕಣ್ಣಿಗೆ ಬಿದ್ದರೆ ನಮ್ಮ ಜನ ಬಿಡುತ್ತಾರೆಯೇ? ಪರಿಸರದಲ್ಲಿ ಅದೂ ಸಹ ಒಂದು ಭಾಗ ಎಂಬ ಅಂಶವನ್ನು ಅರಿತು ಅದಕ್ಕೂ ತೊಂದರೆ ಕೊಡದೆ, ಅವರೂ ತೊಂದರೆಗೆ ಒಳಗಾಗದೆ ನಮ್ಮ ಪೂರ್ವಿಕರ ಸಹಬಾಳ್ವೆಯ ಮಹಾ ತತ್ವವನ್ನು ಎತ್ತಿ ಹಿಡಿಯುವರೇ? ಹಾವು ಕಂಡರೆ ದೊಣ್ಣೆ ಎಲ್ಲಿ ಎನ್ನುವ ಕಾಲ ಘಟ್ಟದಲ್ಲಿ ಅದು ಜನರ ಕಣ್ ತಪ್ಪಿಸಿ ಬದುಕುತ್ತದೆಯೇ? ಕಾಲವೇ ಅದಕ್ಕೆ ಉತ್ತರ ನೀಡಬೇಕು.

ಹುಲ್ಲಸ್ಲೆ = ಹುಲ್ಲಿನ ಪ್ರದೇಶ
ವಾಡೇವು = ಧಾನ್ಯ ತುಂಬುವ ಮಣ್ಣಿನ ದೊಡ್ಡ ಮಡಿಕೆ
ಬುಡ್ಡು = ಕಾಳುಗಳನ್ನು ತುಂಬುವ ಮಡಿಕೆ
ಜಂತೆ = ಮನೆಯ ಮಾಳಿಗೆಯ ಕೆಳಭಾಗ










**ಲೇಖನ: ಮಂಜುನಾಥ್ ಅಮಲಗೊಂದಿ**
**ತುಮಕೂರು ಜಿಲ್ಲೆ**





## ಬೇಲದ ಮರ

**Wood Apple**

*Limonia acidissima*

ಕರಡಿಗಳಿಗೆ ಬಹಳ ಇಷ್ಟವಾದ ಹಣ್ಣುಗಳಲ್ಲಿ ಬೇಲದ ಹಣ್ಣು ಕೂಡ ಒಂದು. ಆನೆಗಳೂ ಕೂಡ ಬೇಲದ ಹಣ್ಣನ್ನು ಇಷ್ಟಪಟ್ಟು ತಿನ್ನುತ್ತವೆ. ಬೇಲದ ಮರಗಳು ಸಾಮಾನ್ಯವಾಗಿ ಎಲೆ ಉದುರುವ ಕುರುಚಲು ಕಾಡುಗಳಲ್ಲಿ, ಶುಷ್ಕ ವಾತಾವರಣ ಇರುವ ಒಣ ಪ್ರದೇಶಗಳಲ್ಲಿ ಕಂಡುಬರುತ್ತವೆ. ಇದು ಬಹಳ ನಿಧಾನವಾಗಿ ಬೆಳೆಯುವ ಮರ. ಇದು ಸುಮಾರು 15 ರಿಂದ 25 ಅಡಿ ಎತ್ತರ ಬೆಳೆಯುತ್ತದೆ. ಬೇಲದ ಮರಗಳನ್ನು ಭೌಗೋಳಿಕವಾಗಿ ಭಾರತ, ಶ್ರೀಲಂಕಾ ಮತ್ತು ಆಗ್ನೇಯ ಏಷ್ಯಾದ ರಾಷ್ಟ್ರಗಳಲ್ಲಿ ಕಾಣಬಹುದು. ಈ ಮರದ ಎಲೆಗಳು ಸಾಮಾನ್ಯವಾಗಿ 5 ಸೆಂ. ಮೀ. ಉದ್ದ, 3 ಸೆಂ. ಮೀ. ಅಗಲಕ್ಕಿರುತ್ತವೆ. ಪ್ರತಿ ಗುಚ್ಛದಲ್ಲೂ 3-5 ಎಲೆಗಳ ಸರಳ ರಚನೆ ಇರುತ್ತದೆ. ಸಾಮಾನ್ಯವಾಗಿ ಇದರ ಎಲೆಗಳು ಚರ್ಮದಂತೆ ದಪ್ಪಗೆ ಇರುತ್ತವೆ. ಚಿಗುರು ಎಲೆಗಳು ತಿಳಿ ಹಸಿರು ಬಣ್ಣದಲ್ಲಿದ್ದು ಪ್ರೌಢಾವಸ್ಥೆಗೆ ಬಂದಾಗ ಗಾಢ ಹಸಿರು ಬಣ್ಣಕ್ಕೆ ತಿರುಗುತ್ತವೆ. ಎಲೆಗಳನ್ನು ಕಿವುಚಿ ಮೂಸಿದರೆ ನಿಂಬೆಯಂತಹ ವಾಸನೆ ಬರುತ್ತದೆ. ಈ ಮರವು ಕಿತ್ತಳೆಯ ಪ್ರಭೇದಕ್ಕೆ ಸೇರಿದೆ. ಬೇಲದ ಮರವು ಶ್ವೇತ ವರ್ಣದ, ಐದು ದಳಗಳಿಂದ ಕೂಡಿದ ಪರಿಮಳಯುಕ್ತ ಹೂಗಳನ್ನು ಬಿಡುತ್ತದೆ. ಇವು ಸಾಮಾನ್ಯವಾಗಿ ಮಾರ್ಚ್ ಮತ್ತು ಏಪ್ರಿಲ್ ತಿಂಗಳಲ್ಲಿ ಹೂ ಬಿಡಲು ಪ್ರಾರಂಭಿಸಿದರೆ, ಮೇ ಮತ್ತು ಜೂನ್ ತಿಂಗಳವರೆಗೂ ಹೂಗಳ ಗುಚ್ಛಗಳನ್ನು



ಮರದಲ್ಲಿ ಕಾಣಬಹುದು. ಈ ಮರವು, 5 ಸೆಂ. ಮೀ. - 12 ಸೆಂ. ಮೀ. ವ್ಯಾಸವುಳ್ಳ ಗೋಳಾಕಾರದ ಕಾಯಿಗಳನ್ನು ಬಿಡುತ್ತವೆ ಹಾಗು ಅಕ್ಟೋಬರ್ ನಿಂದ ಜನವರಿ ತಿಂಗಳವರೆಗೂ ಹಣ್ಣುಗಳು ದೊರೆಯುತ್ತವೆ. ಈ ಕಾಯಿಗಳ ಹೊರಚಿಪ್ಪು ತೆಂಗಿನ ಚಿಪ್ಪಿನಂತಹ ಗಟ್ಟಿಯಾದ ಚಿಪ್ಪಿನಿಂದ ಮಾಡಲ್ಪಟ್ಟಿರುತ್ತದೆ. ಹಣ್ಣಿನ ಹೊರ ಚಿಪ್ಪು ತಿನ್ನಲು ಯೋಗ್ಯವಲ್ಲ. ಬೇಲದ ಹಣ್ಣು ನಾರು ಮಿಶ್ರಿತ ತಿರುಳನ್ನು ಹೊಂದಿರುತ್ತದೆ ಹಾಗೂ ಸ್ವಲ್ಪ ಹುಳಿ, ಸ್ವಲ್ಪ ಸಿಹಿ-ಒಗರನ್ನು ಹೊಂದಿರುತ್ತದೆ. ಇದರ ಹಣ್ಣುಗಳ ಒಳ ಭಾಗದಲ್ಲಿ ಜಿಗುಟಾದ ಕಂದು ತಿರುಳಿನ ನಡುವೆ ಬಿಳಿ ಬೀಜಗಳು ಇರುತ್ತವೆ. ಮಾಗಿದ ಹಣ್ಣುಗಳು ಸುವಾಸನೆ ಬೀರುತ್ತವೆ. ಇದರಿಂದ ಬೇಲದ ಕಾಯಿ ಹಣ್ಣಾಗಿರುವುದನ್ನು ಗುರುತಿಸಬಹುದು. ಹಣ್ಣಾದ ಬೇಲದ ತೊಟ್ಟು ಕಳಚಿ ಮರದಿಂದ ಕೆಳಗೆ ಬೀಳುತ್ತದೆ ಬೇಲದ ಹಣ್ಣಿನ ತಿರುಳನ್ನು ಹಾಗೆಯೇ ತಿನ್ನಬಹುದು. ಬೇಲದ ಹಣ್ಣು ಮತ್ತು ಬೆಲ್ಲ ಬೆರಸಿ ಪಾನಕ ಮಾಡುತ್ತಾರೆ. ಬೇಲದ ಹಣ್ಣಿನ ತಿರುಳನ್ನು ಹಾಲು ಮತ್ತು ಸಕ್ಕರೆಯೊಂದಿಗೆ ಬೆರಸಿ ತಿನ್ನಬಹುದು. ಇದೊಂದು ಔಷಧೀಯ ಮರವೂ ಹೌದು. ಈ ಮರ ಕೀಟಗಳಿಗೆ, ಜೇನು ಮತ್ತು ಚಿಟ್ಟೆಗಳಿಗೆ ಹೂಗಳ ಮೂಲಕ ಮಕರಂದದ ಔತಣವನ್ನು ಉಣಿಸುತ್ತದೆ. ಜಿಂಕೆಗಳು, ಕಾಡುಹಂದಿ, ಕೋತಿ, ಕರಡಿ, ಆನೆಗಳಿಗೆ ಹಣ್ಣುಗಳನ್ನು ನೀಡಿ ಜೀವ ಸಂಕುಲಕ್ಕೆ ಉಪಯುಕ್ತ ಮರವಾಗಿದೆ.


**ಔಷಧೀಯ ಉಪಯೋಗಗಳು:**




ಬೇಲದ ಮರದ ಎಲೆಗಳು ಜ್ವರ ಚಿಕಿತ್ಸೆಯಲ್ಲಿ, ಹೊಟ್ಟೆ ನೋವನ್ನು ಕಡಿಮೆ ಮಾಡಲು ಮತ್ತು ಮೂತ್ರ ವಿಸರ್ಜನೆ ತೊಂದರೆಗಳನ್ನು ನಿವಾರಿಸಲು ಬಹಳ ಉಪಯುಕ್ತವಾಗಿವೆ. ಆಯುರ್ವೇದ ವೈದ್ಯ ಪದ್ಧತಿಯಲ್ಲಿ ಬೇಲದ ಹಣ್ಣುಗಳನ್ನು ಅತಿಸಾರಕ್ಕೆ ಅತ್ಯುತ್ತಮ ಪರಿಹಾರವೆಂದು ಪರಿಗಣಿಸಲಾಗುತ್ತದೆ. ಇವು ಜೀರ್ಣಕ್ರಿಯೆಗೆ ಸಹಾಯ ಮಾಡುವುದರೊಂದಿಗೆ ಹೊಟ್ಟೆಯ ಕಿರಿಕಿರಿಯನ್ನು ಕೂಡ ಶಮನಗೊಳಿಸುತ್ತವೆ. ಅರ್ಧ ಮಾಗಿದ ಹಣ್ಣುಗಳು ಜೀರ್ಣಕಾರಿಯಾಗಿದ್ದು ಅತಿಸಾರ ವಿರೋಧಿ ಗುಣಗಳನ್ನು ಹೊಂದಿರುತ್ತವೆ, ಮಾಗಿದ ಹಣ್ಣುಗಳು ಕಚ್ಚಾ ಹಣ್ಣುಗಳಿಗಿಂತ ಹೆಚ್ಚು ಉಪಯುಕ್ತವಾಗಿದ್ದು ಉಪ-ತೀವ್ರ ಮತ್ತು ದೀರ್ಘಕಾಲದ ಭೇದಿಯನ್ನು ತಡೆಗಟ್ಟಲು ಬಳಸಲಾಗುತ್ತದೆ. ಹಣ್ಣಿನ ತಿರುಳು ಕರುಳಿನ ಲೋಳೆಯ ಪೊರೆಗೆ ಉತ್ತೇಜಕವಾಗಿ ಕಾರ್ಯನಿರ್ವಹಿಸಿ ಅತಿಸಾರವನ್ನು ನಿಲ್ಲಿಸಲು ಸಹಾಯಕವಾಗುತ್ತದೆ.

**ಲೇಖನ:** ಕೆ. ಪಿ. ಶಂಕರಪ್ಪ
ಶಾಂತಮ್ಮ ಎಸ್.
ಬೆಂಗಳೂರು ನಗರ ಜಿಲ್ಲೆ

# ವನಬಂಧ– 05




**ಎಡದಿಂದ ಬಲಕ್ಕೆ:**

**1.** ಮಧ್ಯಪ್ರದೇಶದ ಕೋಳಿ ತಳಿಯೊಂದು ಕಡಕ್ ಕಪ್ಪು ಗರಿ, ಚರ್ಮ ಮತ್ತು ಮಾಂಸಕ್ಕೆ ಹೆಸರುವಾಸಿ - (5)

**4.** ತ್ರಿಮೂರ್ತಿಗಳಲ್ಲಿ ಒಬ್ಬನ ಪುತ್ರ ನದಿಯಾಗಿ ಹರಿದರೆ! - (4)

**7.** ಬಲದಿಂದ ಎಡಕ್ಕೆ ಓದಿದರೆ ಕೋತಿ! ಎಡದಿಂದ ಬಲಕ್ಕೆ ಓದಿದರೆ ವಸಂತದೂತ ಮಧುರ ಸ್ವರವುಳ್ಳ ಹಕ್ಕಿ -(2)

**8.** ದ್ರಾಕ್ಷಿ ತೋಟಕ್ಕೆ ಹೋಗಿ ದ್ರಾಕ್ಷಿ ದಕ್ಕದೇ ಇದ್ದಾಗ ದ್ರಾಕ್ಷಿಯೇ ಹುಳಿ ಎಂದವನೀತ! ಬಲು ಚತುರ! - ಕಾಡಿನರಾಜ ಸಿಂಹಕ್ಕೆ ಮಂತ್ರಿ- (2)

**9.** ಭಾರತದಲ್ಲಿ ಸಾಮಾನ್ಯವಾಗಿ ಕಂಡುಬರುವ ಮೈನಾ ಹಕ್ಕಿ- (4)

**10.** ಮಂಗಳೂರಿನಲ್ಲಿ 'ಪಿಲಿಕುಳ', ಮೈಸೂರಿನಲ್ಲಿ ' ಚಾಮರಾಜೇಂದ್ರ' ಹೆಸರಿನಲ್ಲಿರುವ ಇವೆರಡೂ ಕಾಡುಪ್ರಾಣಿಗಳ ಕೃತಕ ನಿಲಯ- (4)

**12.** ಇಟ್ಟರೆ ಸಗಣಿ, ತಟ್ಟಿದರೆ ಭರಣಿ, ಸುಟ್ಟರೆ? - (3)

**13.** ಬೆಳ್ಳಿ ಮೋಡಗಳಿರುವ ಆಕಾಶ- (3)

**14.** ಬಾಲ್ಯದಲ್ಲಿ ಕೆಸರಾಡಿ, ಮೀನು- ಏಡಿಗಳನ್ನು ಹಿಡಿದು, ಭತ್ತ ಬೆಳೆಯುತ್ತಿದ್ದ ಜಾಗ- (2)

**15.** ದಪ್ಪನೆ ಕೂದಲು, ಸುರುಳಿಯಾಕಾರದ ಕೋಡುಗಳುಳ್ಳ ಗಂಡು ಕುರಿ - (3).

**ಮೇಲಿನಿಂದ ಕೆಳಗೆ:**

**1.** ಮಳೆಗಾಲದಲ್ಲಿ ಸ್ವಲ್ಪ ನೆಗಡಿಯಾದರೂ ಅಮ್ಮ ಹತ್ತಾರು ಗಿಡಮೂಲಿಕೆ, ಅಡುಗೆಮನೆಯ ವಿವಿಧ ಪದಾರ್ಥಗಳನ್ನು ಹಾಕಿ ಮಾಡಿಕೊಡುವ ಮನೆಮದ್ದು- (3)

**2.** ಹೂವಿನೊಂದಿಗೆ ಸ್ವರ್ಗ ಸೇರಿದ ಬಾಳೆಗಿಡದ ಈ ಭಾಗ - (2)

**3.** ಪತ್ರೆಗಳಲ್ಲಿರುವ ಹಸಿರು ವರ್ಣ- (5)

**4.** ಕೆಸರಲ್ಲಿ ಹುಟ್ಟಲಿಲ್ಲ, ಹೆಸರಲ್ಲಿ ಕಮಲವಿದೆ! ವರುಷಕೊಮ್ಮೆ ಬರುವೆ, ರಾತ್ರಿಯಲ್ಲಿ ಅರಳುವೆ, ಶ್ವೇತ ವರ್ಣದ ಚೆಲುವೆ, ನಾನು ಯಾರು? - (5)

**5.** ಜಾದೂಗಾರನೊಬ್ಬನ ' ಅಬ್ರುಕಚುಬ್ರುಕ...' ಜಾದು ಮಂತ್ರದಲ್ಲಿ ಕಾಣುತ್ತಿರುವ ಕಾಗೆ ಬಂಗಾರ - (3)

**6.** ಬಾಲ್ಯದಲ್ಲಿ ಮರ ಹತ್ತಿ ಆಡಿದ ಆಟ- (6)

**10.** ಎಮ್ಮೆ ಅಥವಾ ಇತರೆ ಮೃಗದ ಚರ್ಮದಿಂದ ಮಾಡುವ ವಾದ್ಯ- (3)

**11.** ಯಮುನೋತ್ರಿ ಹಿಮನದಿಯಿಂದ ಹುಟ್ಟಿಕೊಂಡ ಇದು ಭಾರತದ ಅತಿ ಉದ್ದದ ಉಪನದಿ - (3)

**12.** ಸರ್ಪದ ಕೋರೆ ಹಲ್ಲಿನಿಂದ ಸ್ರವಿಸುವ ರಸ - (2)

**ವನಬಂಧ - 04 ಉತ್ತರಗಳು:**

**<u>ಎಡದಿಂದ</u> <u>ಬಲಕ್ಕೆ</u>:**

1. ಅಶೋಕವನ 2. ಶೇಂಗಾ 3. ಸೀಮೆಎಣ್ಣೆ 5. ಪಾಚಿ 7. ಸೌದಿ 8. ನಾರಿಕೇಳ.
9. ಕಲ್ಲಂಗಡಿ. 10. ಹುತ್ತರಿ.12. ನಿಯತ್ತು 13. ಕರು 14. ದ್ರಾಕ್ಷಿ

**<u>ಮೇಲಿನಿಂದ ಕೆಳಕ್ಕೆ</u>:**

1. ಅಘನಾಶಿನಿ 2. ಶೇಂದಿ 3. ಸೀಗಡಿ 4. ಎರೆಹುಳು 6. ಚಿಪ್ಕೋ 7. ಸೌರವ್ಯೂಹ
9. ಕನಕ 11. ಅಕ್ಕಿ

**ವನಬಂಧ - 04 ಅಂಕಣಕ್ಕೆ ಸರಿಯಾದ ಉತ್ತರ ಕೊಟ್ಟ ಎಲ್ಲರಿಗೂ ಧನ್ಯವಾದಗಳು**

1. ಅರ್ಜುನ್ ಗೌಡ (ಹಾಸನ ಜಿಲ್ಲೆ)
2. ಸ್ವೀಕೃತಾ (ಶಿವಮೊಗ್ಗ ಜಿಲ್ಲೆ)
3. ಸೌಮ್ಯ (ದಕ್ಷಿಣ ಕನ್ನಡ ಜಿಲ್ಲೆ)

**"ಈ ಮೇಲಿನ ವನಬಂಧವನ್ನು ಉತ್ತರಿಸಿ ನಮ್ಮ ವಿಳಾಸಕ್ಕೆ ಇದೇ ತಿಂಗಳ ದಿನಾಂಕ 20ರ ಒಳಗೆ ಕಳುಹಿಸಿ ಕೊಟ್ಟವರಿಗೆ ಪುಟ್ಟ ಬಹುಮಾನ ನೀಡಲಾಗುವುದು. (ಇ-ಮೇಲ್ ವಿಳಾಸಕ್ಕಾಗಿ ನೀವೂ ಕಾನನಕ್ಕೆ ಬರೆಯಬಹುದು ಅಂಕಣವನ್ನು ಓದಿ)"**

**ವನಬಂಧ: ಅಕ್ಷತ ಹೆಚ್. ಕೆ.**

ಚಿಕ್ಕಮಗಳೂರು ಜಿಲ್ಲೆ







# ಫಂಗೈ ಎಸೆಯುತ್ತಿರುವ ಅಲರ್ಜಿ ಎಂಬ ಭರ್ಜಿ!

ಮುಖ ಮುಚ್ಚಿಕೊಂಡರೆ ಕಾಲಿಗೆ ಸಾಲದು, ಕಾಲಿನಲ್ಲಿ ಎಳೆದುಕೊಂಡರೆ ಮುಖಕ್ಕೆ ಸಿಗದು. ಕೆಲವೊಮ್ಮೆ ಸ್ವಲ್ಪ ಸಣ್ಣ ಬೆಡ್ ಶೀಟ್ ಅನ್ನು ಬಳಸುವಾಗ ನಿಮಗೂ ಈ ತೊಂದರೆ ಆಗಿರುತ್ತದೆ. ಆದರೆ ನನ್ನ ವಿಚಾರದಲ್ಲಿ, ಆಗಿನ್ನೂ ನಾನು ಪಿ.ಯು.ಸಿ. ತೆಳುವಾದ ಬೆಡ್ ಶೀಟ್, ನಾವಿದ್ದ ರೂಮ್ ಬೇರೆ ಚಳಿಗಾಲದಲ್ಲಿ ಎ.ಸಿ. ಯಂತೆ ಕೆಲಸ ಮಾಡುತ್ತದೆ. ಹೇಗೋ ಕಷ್ಟಪಟ್ಟು ಮುಖ ಹಾಗೂ ಕಾಲಿಗೆ ಸೇರಿಸಿ ಬೆಡ್ ಶೀಟ್ ಅನ್ನು ಹೊದ್ದುಕೊಂಡರೂ ಆ ಪಾಪಿ ಚಳಿಗಾಳಿ ಆ ತೆಳುವಾದ ಬೆಡ್ ಶೀಟ್ ನ ಒಳಗೂ ನುಸುಳಿ ಭಾರೀ ತೊಂದರೆ ಕೊಡುತ್ತಿತ್ತು. ಅಷ್ಟೇ ಆದರೆ ಪರವಾಗಿಲ್ಲ. ನಮ್ಮ ಆ ರೂಮಿನ ಗೋಡೆಗಳು ಎಷ್ಟು ಚೆನ್ನಾಗಿ ತೇವಾಂಶವನ್ನು ಹಿಡಿದು ಇಟ್ಟುಕೊಳ್ಳುತ್ತಿದ್ದವು ಅಂದರೆ, ಬಹುಶಃ ಯಾವುದೇ ತೊಂದರೆ ಇಲ್ಲದೆ ಅಣಬೆ ಕೃಷಿ ಮಾಡಬಹುದಿತ್ತೇನೋ. ನಮ್ಮ ಈ ಸಂದರ್ಭದಲ್ಲಿ ಹೆಚ್ಚು ಕಡಿಮೆ ಹಾಗೇ ಆಯಿತು. ಅಣಬೆಯನ್ನು ನಾವು ಬೆಳೆದಿಲ್ಲ, ಆದರೆ ಬೇರೆ ಪ್ರಭೇದದ ಶಿಲೀಂಧ್ರಗಳು (ಫಂಗೈ) ಗೋಡೆಗಳ ಮೇಲೆ, ನಮ್ಮ ಬೆಡ್ ಶೀಟಿನ ಮೇಲೆ, ಅಷ್ಟೇ ಯಾಕೆ ನಮ್ಮ ಯುನಿಫಾರ್ಮ್ ಮೇಲೆ ಕೂಡಾ ಬೆಳೆದು ತಮ್ಮ ಆ ಫಂಗೈ ಸುವಾಸನೆ ಬೀರುತ್ತಿತ್ತು. ನಮ್ಮ ಪುಣ್ಯಕ್ಕೆ ಅದರಿಂದ ನಮಗೆ ದೊಡ್ಡದಾದ ಅಲರ್ಜಿ ಅಥವಾ ರೋಗಗಳು ಬಾರದಿದ್ದರೂ ನಮಗೆ ಕಾಟ ಕೊಡುತ್ತಿದ್ದದಂತೂ ನಿಜ. ನಾನಿದ್ದ ಆಶ್ರಮದ ತೋಟದ ರೂಮಿನಲ್ಲಿ ಇದು ಪ್ರತೀ ವರ್ಷ ನಡೆಯುವ ಸಾಮಾನ್ಯ ಸಂಗತಿ. ಇತ್ತೀಚಿನ ದಿನಗಳಲ್ಲಿ ಬದಲಾದ ಯಾಂಟಿ-ಫಂಗೈ ಪೈಂಟ್ ಗಾಲ ಸಹಾಯದಿಂದ ಫಂಗೈ ತೊಂದರೆಗಳು ಸ್ವಲ್ಪ ಕಡಿಮೆ ಆಗಿದೆ.

ತಕ್ಕಮಟ್ಟಿಗೆ ಉಷ್ಣವಲಯವಾದ ನಮ್ಮ ಭಾರತದಂತಹ ಪ್ರದೇಶದಲ್ಲೇ ಹೀಗಿರುವಾಗ ಚಳಿಯುಕ್ತ ಪ್ರದೇಶಗಳಾದ ಅಮೆರಿಕಾದಂತಹ ದೇಶಗಳ ಜನರ ಪಾಡೇನು ಪಾಪ? ನಮ್ಮ ಊಹೆಯಂತೆ ಅಲ್ಲಿ ಈ ಫಂಗೈ ಮತ್ತು ಪೋಲನ್‌ಅಲರ್ಜಿಗಳು ನಮಗಿಂತ ಹೆಚ್ಚು. ವರ್ಷದ ಒಂದು ಸಮಯದಲ್ಲಿ ಎಲ್ಲರೂ ಎದುರಿಸಬೇಕಾದ ಸಾಮಾನ್ಯ ಸಮಸ್ಯೆ ಅದು. ಆದರೆ ಇತ್ತೀಚೆಗಿನ ವರುಷಗಳಲ್ಲಿ, ಸಾಮಾನ್ಯವಾಗಿ ವಸಂತ ಕಾಲದಲ್ಲಿ ಬರುತ್ತಿದ್ದ ಈ ಅಲರ್ಜಿಗಳು ಅವರಿಗೆ ಈಗ ಸುಮಾರು 3 ವಾರಗಳು ಬೇಗ ಬರತೊಡಗಿವೆಯಂತೆ. ಒಂದು ದಶಕದ ಹಿಂದೆ ವಸಂತ ಋತುವಿನಲ್ಲಿ ಆಗುತ್ತಿತ್ತು ಆದರೆ ಈಗ ಅದಕ್ಕಿಂತ ಸುಮಾರು ಒಂದು ತಿಂಗಳ ಮುಂಚೆಯೇ ಆಗುತ್ತಿದೆ. ಇದಕ್ಕೆ ಕಾರಣ ಏನೆಂದು ಹುಡುಕುತ್ತಾ ಹೋದ ಮಿಷಿಗನ್ ವಿಶ್ವವಿದ್ಯಾಲಯದ ಪರಿಸರಶಾಸ್ತ್ರಜ್ಞೆ ಕಾಯ್ ಝು ಅವರಿಗೆ ತಿಳಿದದ್ದು ಇದಕ್ಕೆಲ್ಲಾ ಕಾರಣ ನಮ್ಮ ನಿಮ್ಮೆಲ್ಲರ ಶ್ರಮದ ಫಲ 'ಹವಾಮಾನ ಬದಲಾವಣೆ'.



ಇದು ನಾವು ಲೆಕ್ಕಿಸದೆ ಇರುವಷ್ಟು ಸಣ್ಣ ವಿಚಾರವಲ್ಲ ಎನ್ನುತ್ತಾರೆ ಕಾಯ್ ಝು. ಏಕೆಂದರೆ ಈ ಹವಾಮಾನ ಬದಲಾವಣೆಯಿಂದ ಬೇಗ ಅರಳುವ ಹೂಗಳು ತಮ್ಮ ಸ್ವಾಭಾವಿಕ ಸಮಯಕ್ಕೆ ಮುಂಚೆಯೇ ಅರಳುವುದಲ್ಲದೇ, ಹೆಚ್ಚೆಚ್ಚು ಪೋಲನ್ (ಪರಾಗ ಕಣಗಳು) ಗಳನ್ನು ಗಾಳಿಗೆ ತೂರಿ ಬಿಡುತ್ತಿವೆಯಂತೆ. ಇದರಿಂದ ಎಷ್ಟೋ ಜನರಿಗೆ ಪೋಲನ್ ಅಲರ್ಜಿ ಹೆಚ್ಚಾಗುತ್ತಿದೆ. ಅದೊಂದೇ ಅಲ್ಲ, ಅದರ ಜೊತೆ ಜೊತೆಗೆ ಈ ಫಂಗೈ ಅಲರ್ಜಿ ಸಂಖ್ಯೆಯು ಹೆಚ್ಚುತ್ತಿದೆಯಂತೆ. ಈಗಾಗಲೇ ಅಮೆರಿಕಾದಲ್ಲಿ ಪ್ರತಿ ಐವರಲ್ಲಿ ಒಬ್ಬರಿಗೆ ಫಂಗೈ ಅಲರ್ಜಿ ಆಗಿ ಅದರಿಂದ ಬಾಧಿತರಾಗುತ್ತಿದ್ದಾರಂತೆ. ಆ ಬಾಧೆಯಿಂದ ಮೂಗಿನಲ್ಲಿ ಆಗುವ ನವೆ/ತುರಿಕೆ, ಕಣ್ಣು ಮತ್ತು ಗಂಟಲುಗಳಲ್ಲಿ ಆಗುವ ಇರಿಟೇಷನ್ ಹಾಗೂ ಉಸಿರಾಟದ ತೊಂದರೆಗಳು ಸಹಿಸುವವರಿಗೇ ಗೊತ್ತು.

ಇದನ್ನು ವೈಜ್ಞಾನಿಕವಾಗಿ ಅರಿಯಲು ಝು ಅವರ ತಂಡ ಯು. ಎಸ್. ನಲ್ಲಿರುವ ಪ್ರಮುಖ ಆಸ್ಪತ್ರೆಗಳಲ್ಲಿ ದಾಖಲಿಸಲಾದ 55 'ನ್ಯಾಷನಲ್ ಅಲರ್ಜಿ ಬ್ಯುರೋ' ಗೆ ಸೇರಿದ 2003 ರಿಂದ 2022 ಕಾಲಘಟ್ಟದಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ಪಡೆದು ಅಭ್ಯಸಿಸಿದ ಅನುಸಾರ, ಈ ಫಂಗಲ್ ಅಲರ್ಜಿ ಸಾಮಾನ್ಯವಾಗಿ ಶುರುವಾಗುತ್ತಿದ್ದ ಸಮಯಕ್ಕಿಂತ 22 ದಿನ ಅಂದರೆ ಸರಿ ಸುಮಾರು 3 ವಾರಗಳ ಮುಂಚೆಯೇ ಶುರುವಾಗುತ್ತಿರುವುದು ನಾವೆಲ್ಲಾ ಗಂಭೀರವಾಗಿ ಪರಿಗಣಿಸಬೇಕಾದ ವಿಚಾರವೇ. ಏಕೆಂದರೆ



ಈ ಹಿಂದಿನ ಕೆಲವು ಲೇಖನಗಳಲ್ಲಿ ಹೇಳಿರುವಂತೆ ಈ ಫಂಗಲ್ ಡಿಸೀಸಸ್/ ಶಿಲೀಂಧ್ರ ರೋಗಗಳು ಮಾನವನಿಗೆ ಹೆಚ್ಚು ಕಾಟ ಕೊಡಲು ಅವಕಾಶ ಸಿಗಲಿಲ್ಲ, ಆದರೆ ಈಗಿನ ಬದಲಾಗುತ್ತಿರುವ ಹವಾಮಾನ ಹಾಗೂ ವಾತಾವರಣ ನಮ್ಮನ್ನು ಸಹ ಅವುಗಳ ಬಲ ಪ್ರಯೋಗಿಸಬಲ್ಲ ಬಲಹೀನ ಪ್ರಭೇದಗಳ ಗುಂಪಿಗೆ ಸೇರಿಸಿಬಿಡುತ್ತವೆ ಎಚ್ಚರ. ಒಮ್ಮೆ ಶಿಲೀಂದ್ರ ರೋಗಗಳು ಶುರುವಾದರೆ ಯಾರಿಗೆ ಗೊತ್ತು ಕೊರೋನಾ ಹಾಗೆ ಇನ್ನೊಂದು ತೀವ್ರ ಸಾಂಕ್ರಾಮಿಕ ರೋಗ ಉಗಮವಾಗಬಹುದು.

ಪ್ರಪಂಚಾದ್ಯಂತ ಹರಡಿರುವ ಬದಲಾದ ನಮ್ಮ ಜೀವನ ಶೈಲಿ ಹಾಗೂ ನಮ್ಮ ದಿನಬಳಕೆಯ ವಸ್ತುಗಳಿಂದ ಹವಾಮಾನ ಬದಲಾವಣೆ ಆಗುತ್ತಿರುವುದು ನಮಗೆಲ್ಲಾ ತಿಳಿದ ವಿಚಾರವೇ. ಆದರೆ ಅದರ ಪರಿಣಾಮಗಳು ಇನ್ನು ನಮ್ಮ ಅಜ್ಞಾನ ಪರದೆಯ ಹಿಂದೆಯೇ ಇವೆ. ಅದರಲ್ಲಿ ಹುಡುಕಿ ಸಿಕ್ಕಿರುವ ಒಂದು ಉದಾಹರಣೆಯಿದು. ಹಾಗಾಗಿ ನಾವೇ ಮುಖ್ಯ ಕಾರಣಿಗರಾಗಿ ಮಾಡಿದ ಹವಾಮಾನ ಬದಲಾವಣೆ ಎಂಬ ಪಾಪದ ಫಲವನ್ನು ತಾನು ಬಳಸಿಕೊಂಡು ಫಂಗೈ ಎಸೆಯುತ್ತಿರುವ ಅಲರ್ಜಿಯ ಭರ್ಜಿಯಿಂದ ತಪ್ಪಿಸಿಕೊಂಡೇವಾ ನಾವು?




**Source:** www.snexplores.org



**ಲೇಖನ: ಜೈಕುಮಾರ್ ಆರ್.**
ಬೆಂಗಳೂರು ನಗರ ಜಿಲ್ಲೆ

# ನೆಲದನಿ

ಈ ಜಗದಿ ಹಸಿರು
ಜೀವ ಜಗದ ಉಸಿರು
ಮಳೆ ಮೋಡದ ಓಟ
ಕಣ್ಣ ಸವಿಗೆ ನೋಟ

ಗುಡ್ಡ ಬೆಟ್ಟ ಕಾನು
ಸುತ್ತ ಹಾರುವ ಜೇನು
ಹರಿವ ನೀರ ಝುರಿ
ಮನಸ ತುಂಬಾ ಲಹರಿ

ಮಣ್ಣು ಹಸಿರಿನ ಆಸರೆ
ಬೇರು ನೆಲೆಯ ಕಂಡಿರೆ
ಸಸಿಯ ಸೊಬಗು ತುಂಬಿದೆ
ಅನ್ನದ ಉಸಿರ ಕಾದಿವೆ

ಹೊಸ ಮೋಡದ ಹನಿಗೆ
ಸಂತಸ ಕಾಣುವ ಕಣ್ಣಿಗೆ
ಹೂವದು ಚೆಂದ ಹಗಲಿಗೆ
ಬುವಿಯದು ಅಂದ ನಗುವಿಗೆ

ಹಕ್ಕಿ ಹಾಡಿನ ಉಳಿವು
ಹಸಿರು ಸಾರಿದ ಒಲವು
ಬೆಳಕು ಕಾಣುವ ಜಗವಿದು
ನೆಲದನಿ ಸಿರಿಯ ಹಾಡಿದು.

- ನಾಗರಾಜ ಬಿ. ನಾಯ್ಕ
ಉತ್ತರ ಕನ್ನಡ ಜಿಲ್ಲೆ

© ಹೂರ್ ಬಾನು

# ಪ್ರಕೃತಿ ಬಿಂಬ



**ಗುಲಾಬಿ ಕೊರಳಿನ ಗಿಳಿ** © ಭಗವತಿ ಬಿ. ಎಂ.

ಆಫ್ರಿಕಾ ಮತ್ತು ದಕ್ಷಿಣ ಏಷ್ಯಾದ ವಿವಿಧ ಪ್ರದೇಶಗಳಲ್ಲಿ ಕಂಡುಬರುವ ಈ ಗುಲಾಬಿ ಕೊರಳಿನ ಗಿಳಿಯು ಸಿಟ್ಟಾಕುಲಿಡೇ (Psittaculidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಸಿಟ್ಟಾಕುಲಾ ಕ್ರಮೇರಿ (Psittacula krameri) ಎಂದು ಕರೆಯಲಾಗುತ್ತದೆ. ಮೈ ಬಣ್ಣವು ಹಸಿರಾಗಿದ್ದು, ಕೆಂಪು ಕೊಕ್ಕು ಮತ್ತು ನೀಲಿ ಬಾಲವನ್ನು ಹೊಂದಿರುತ್ತದೆ. ಗಂಡು ಹಕ್ಕಿಗೆ ಗುಲಾಬಿ ಮತ್ತು ಕಪ್ಪು ಬಣ್ಣದ ಉಂಗುರವು ಕುತ್ತಿಗೆಯ ಭಾಗದಲ್ಲಿ ಇರುತ್ತದೆ. ಮರಗಳ ಅಥವಾ ಕಟ್ಟಡಗಳಲ್ಲಿನ ರಂಧ್ರ ಮತ್ತು ಪೊಟರೆಗಳಲ್ಲಿ ಗೂಡು ಮಾಡಿ 3-4 ಮೊಟ್ಟೆಗಳನ್ನು ಇಟ್ಟು ಮರಿಮಾಡುತ್ತವೆ. ಹಣ್ಣುಗಳು, ಹೂವು, ಮಕರಂದ, ಬೀಜಗಳು, ಧಾನ್ಯಗಳು ಮತ್ತು ಕೀಟಗಳು ಇವುಗಳ ಆಹಾರವಾಗಿವೆ.



**ಬೆಳ್ಗಣ್ಣ** © ಭಗವತಿ ಬಿ. ಎಂ.

ದಕ್ಷಿಣ ಹಾಗೂ ಆಗ್ನೇಯ ಏಷ್ಯಾದ ತೋಟ, ಅರಣ್ಯ ಪ್ರದೇಶ ಹಾಗೂ ಮ್ಯಾಂಗ್ರೋವ್ ಗಳಲ್ಲಿ ಕಂಡು ಬರುವ ಈ ಬೆಳ್ಗಣ್ಣ ಹಕ್ಕಿಯು ಜೋಸ್ಟೆರೋಪಿಡೆ (Zosteropidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಜೋಸ್ಟೆರೋಪ್ಸ್ ಪಾಲ್ಪೆಬ್ರೋಸಸ್ (Zosterops palpebrosus) ಎಂದು ಕರೆಯಲಾಗುತ್ತದೆ. ದೇಹವು ಹಳದಿ ಮಿಶ್ರಿತ ಹಸಿರು ಬಣ್ಣವಿದ್ದು, ಕಣ್ಣ ಸುತ್ತಲೂ ಉಂಗುರಾಕಾರದಲ್ಲಿ ಬಿಳಿಯ ಬಣ್ಣವಿರುತ್ತದೆ. ಹೊಟ್ಟೆಯ ಭಾಗವು ಬೂದು ಮಿಶ್ರಿತ ಬಿಳಿ ಬಣ್ಣವಿರುತ್ತದೆ. ಸಾಮಾನ್ಯವಾಗಿ ಮರಗಳ ಮೇಲೆ ಗುಂಪುಗಳಲ್ಲಿ ಕಾಣಿಸುತ್ತದೆ. ವಿವಿಧ ರೀತಿಯ ಕೀಟಗಳನ್ನು ಸೇವಿಸುತ್ತದೆ ಕೆಲವು ಪ್ರಭೇದಗಳು ಮಕರಂದ ಮತ್ತು ಹಣ್ಣುಗಳನ್ನೂ ಸಹ ತಮ್ಮ ಆಹಾರವಾಗಿ ಸೇವಿಸುತ್ತವೆ. ಜೇಡರ ಬಲೆ, ಕಲ್ಲುಹೂವುಗಳು ಮತ್ತು ಸಸ್ಯದ ನಾರುಗಳಿಂದ ರೆಂಬೆಗಳ ಕವಲುಗಳ ಮಧ್ಯೆ ತೂಗು ಹಾಸಿಗೆಯಂತಹ ಗೂಡನ್ನು ಕಟ್ಟಿ, ಮಸುಕಾದ ಎರಡು ನೀಲಿ ಮೊಟ್ಟೆಗಳನ್ನು ಇಟ್ಟು ಮರಿ ಮಾಡುತ್ತವೆ. ಗಂಡು ಮತ್ತು ಹೆಣ್ಣು ಹಕ್ಕಿಗಳೆರಡೂ ಕಾವು ಕೊಡುತ್ತವೆ ಮತ್ತು ಆಹಾರ ನೀಡುವ ಕೆಲಸವನ್ನೂ ಹಂಚಿಕೊಳ್ಳುತ್ತವೆ.



**ನಾಮದ ಕೋಳಿ** © ಭಗವತಿ ಬಿ. ಎಂ.

ಯುರೋಪ್, ಏಷ್ಯಾ, ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಮತ್ತು ಉತ್ತರ ಆಫ್ರಿಕಾದ ಕೆಲವು ಭಾಗಗಳ ಸರೋವರ ಹಾಗೂ ಕೊಳಗಳಲ್ಲಿ ಕಂಡುಬರುವ ಈ ಹಕ್ಕಿಯು ರಾಲಿಡೇ (Rallidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಫುಲಿಕಾ ಅಟ್ರಾ (Fulica atra) ಎಂದು ಕರೆಯಲಾಗುತ್ತದೆ. ಮೈ ಬಣ್ಣವು ಕಡು ಕಂದು ಬಣ್ಣದಲ್ಲಿದ್ದು, ಬಿಳಿ ಕೊಕ್ಕು ಹಾಗೂ ಬಿಳಿ ಹಣೆಯನ್ನು ಹೊಂದಿದೆ. ಪಾಚಿ, ಹಣ್ಣು, ಬೀಜಗಳು ಮತ್ತು ಇತರೆ ಪಕ್ಷಿಗಳ ಮೊಟ್ಟೆಗಳನ್ನು ಸೇವಿಸುತ್ತದೆ. ಸದಾ ಜೋರಾದ ಗದ್ದಲವನ್ನು ಮಾಡುತ್ತದೆ. ತಮ್ಮ ಎದುರಾಳಿಗಳನ್ನು ಉದ್ದವಾದ ಕಾಲುಗಳಿಂದ ಹೊಡೆಯುವ ಮೂಲಕ ಆಕ್ರಮಣ ಮಾಡುತ್ತದೆ. ನೀರಿನಲ್ಲಿರುವ ಸಸ್ಯಗಳಿಂದ ದೊಡ್ಡ, ತೇಲುವ ಗೂಡುಗಳನ್ನು ನಿರ್ಮಿಸಿ, ಕಪ್ಪು ಚುಕ್ಕೆಗಳಿರುವ 6-10 ಮಸುಕಾದ, ಕಂದು ಬಣ್ಣದ ಮೊಟ್ಟೆಗಳನ್ನು ಇಡುತ್ತದೆ. ಗಂಡು ಮತ್ತು ಹೆಣ್ಣು ಹಕ್ಕಿಗಳೆರಡೂ ಕಾವು ಕೊಡುತ್ತವೆ ಮತ್ತು ಆಹಾರ ನೀಡುವ ಕೆಲಸವನ್ನೂ ಹಂಚಿಕೊಳ್ಳುತ್ತವೆ.



**ಬಿಳಿಹುಬ್ಬಿನ ಬೀಸಣಿಗೆ ನೊಣಹಿಡುಕ** © ಭಗವತಿ ಬಿ. ಎಂ.

ಭಾರತೀಯ ಉಪಖಂಡ ಮತ್ತು ಆಗ್ನೇಯ ಏಷ್ಯಾದ ಕಾಡುಗಳಲ್ಲಿ ಕಂಡುಬರುವ ಬಿಳಿಹುಬ್ಬಿನ ಬೀಸಣಿಗೆ ನೊಣಹಿಡುಕ ಹಕ್ಕಿಯು ರಿಪಿಡುರಿಡೆ (Rhipiduridae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ರಿಪಿದುರಾ ಔರಿಯೊಲಾ (Rhipidura aureola) ಎಂದು ಕರೆಯಲಾಗುತ್ತದೆ. ಮೇಲ್ಭಾಗವು ಕಡುಗಂದು ಬಣ್ಣವಿದ್ದು, ಕೆಳಭಾಗವು ಬಿಳಿಯ ಬಣ್ಣದಲ್ಲಿರುತ್ತದೆ. ಬಿಳಿಯ ಹುಬ್ಬು, ರೆಕ್ಕೆಯ ಮೇಲೆ ಬಿಳಿಯ ಮಚ್ಚೆಗಳು ಹಾಗೂ ಫ್ಯಾನ್ ಆಕಾರದ ಬಾಲವನ್ನು ಹೊಂದಿರುತ್ತದೆ. ಕೀಟಗಳನ್ನು ತಮ್ಮ ಆಹಾರವಾಗಿ ಸೇವಿಸುತ್ತವೆ. ನೀರಿನ ಸಮೀಪವಿರುವ ಸ್ಥಳಗಳಲ್ಲಿ, ನೆಲದ ಮೇಲೆ, ಗೋಡೆಯ ಅಂಚುಗಳು, ಅಥವಾ ರಂಧ್ರಗಳಲ್ಲಿ ಹುಲ್ಲು, ಬೇರು ಮತ್ತು ಇತರ ವಸ್ತುಗಳಿಂದ ಗೂಡನ್ನು ಕಟ್ಟಿ ಕೂದಲು ಅಥವಾ ಉಣ್ಣೆಯಿಂದ ಮುಚ್ಚುತ್ತವೆ. 3-5 ಮೊಟ್ಟೆಗಳನ್ನು ಇಟ್ಟು ಮರಿ ಮಾಡುತ್ತವೆ.

**ಚಿತ್ರ:** ಭಗವತಿ ಬಿ. ಎಂ.

**ಲೇಖನ:** ದೀಪ್ತಿ ಎನ್.

# ನೀವೂ ಕಾನನಕ್ಕೆ ಬರೆಯಬಹುದು




ಪ್ರಪಂಚದ ವಿವಿಧ ಭಾಗಗಳಲ್ಲಿ ಮೀನು ಜನರ ಪ್ರಮುಖ ಆಹಾರವಾಗಿದೆ. ಮೀನುಗಾರರ ಸಮುದಾಯವು ಸಮುದ್ರ ಮತ್ತು ಇತರ ಜಲ ವ್ಯವಸ್ಥೆಗಳೊಡನೆ ಅವಿನಾಭಾವ ಸಂಬಂಧವನ್ನು ಹೊಂದಿದ್ದು, ವ್ಯಾಪಾರ ಮತ್ತು ವಾಣಿಜ್ಯ ವಹಿವಾಟಿನಲ್ಲಿ ಮೈಲಿಗಲ್ಲು ಸಾಧಿಸಬಹುದಾಗಿದೆ. ಆದರೆ ಇಂದು ಮೀನುಗಾರಿಕೆ ಉದ್ಯಮವು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದೆ. ಅವೈಜ್ಞಾನಿಕ ಮತ್ತು ಅತಿಯಾದ ಮೀನುಗಾರಿಕಾ ಚಟುವಟಿಕೆಗಳು ಆವಾಸಸ್ಥಾನಗಳ ನಾಶಕ್ಕೆ ಕಾರಣವಾಗುತ್ತಿವೆ. ಸಮುದ್ರಗಳು ಮತ್ತು ಸಾಗರಗಳಲ್ಲಿ ನೀಲಿ, ಹಸಿರು ಪಾಚಿಗಳ ಬೆಳವಣಿಗೆ, ತೈಲ ಸೋರಿಕೆ, ಪ್ಲಾಸ್ಟಿಕ್ ಮಾಲಿನ್ಯ, ಜಾಗತಿಕ ತಾಪಮಾನ ಏರಿಕೆ, ವಿಷಕಾರಿ ರಾಸಾಯನಿಕಗಳ ಬಳಕೆ, ಮೀನುಗಳನ್ನು ಅಳಿವಿನಂಚಿಗೆ ತರಬಹುದಾದ ಎಲ್ಲಾ ಸಾಧ್ಯತೆಗಳನ್ನು ಕಲ್ಪಿಸಿವೆ. ಈ ನಿಟ್ಟಿನಲ್ಲಿ ನವೆಂಬರ್ 21ರಂದು ಅಂತರರಾಷ್ಟ್ರೀಯ ಮೀನುಗಾರಿಕೆ ದಿನವೆಂದು ಆಚರಿಸಲಾಗುತ್ತದೆ. ಈ ಆಚರಣೆಯ ಮೂಲ ಉದ್ದೇಶ, ಮೀನುಗಳ ಸಂತತಿಯನ್ನು ರಕ್ಷಿಸಲು ವೈಜ್ಞಾನಿಕ ಮೀನುಗಾರಿಕೆಯ ವಿಧಾನಗಳನ್ನು ಪ್ರೋತ್ಸಾಹಿಸಿ ಉತ್ತಮ ಅವಕಾಶಗಳನ್ನು ಕಲ್ಪಿಸುವುದು, ವ್ಯಾಪಾರ ಮತ್ತು ಸಮುದಾಯಗಳ ಪ್ರಾಚೀನ ಇತಿಹಾಸವನ್ನು ಸಂರಕ್ಷಿಸುವುದು, ಪರಿಸರದೊಂದಿಗಿನ ಸಹಬಾಳ್ವೆಯನ್ನು ಎತ್ತಿ ಹಿಡಿಯುವುದು ಇತ್ಯಾದಿ.

ಈ ರೀತಿಯ ಪರಿಸರದ ಬಗೆಗಿನ ಮಾಹಿತಿಯನ್ನು ಒದಗಿಸಲು ಇರುವ ಕಾನನ ಇ-ಮಾಸಿಕಕ್ಕೆ ಮುಂದಿನ ತಿಂಗಳ ಸಂಚಿಕೆಗೆ ಲೇಖನಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ಪರಿಸರಕ್ಕೆ ಸಂಬಂಧಿಸಿದ ಕಥೆ, ಕವನ, ಛಾಯಾಚಿತ್ರ, ಚಿತ್ರಕಲೆ, ಪ್ರವಾಸ ಕಥನಗಳನ್ನು ಕಾನನ ಮಾಸಿಕದ ಇ-ಮೇಲ್ ವಿಳಾಸಕ್ಕೆ ಕಳುಹಿಸಬಹುದು.

**ಕಾನನ ಪತ್ರಿಕೆಯ ಇ-ಮೇಲ್ ವಿಳಾಸ**: kaanana.mag@gmail.com

**ಅಂಚೆ ವಿಳಾಸ**:

ವೈಲ್ಡ್ ಲೈಫ್ ಕನ್ಸರ್ವೇಷನ್ ಗ್ರೂಪ್,
ಅಡವಿ ಫೀಲ್ಡ್ ಸ್ಟೇಷನ್,
ಒಂಟೆಮಾರನ ದೊಡ್ಡಿ, ರಾಗಿಹಳ್ಳಿ ಅಂಚೆ,
ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ,
ಪಿನ್ ಕೋಡ್ : 560083. ಗೆ ಕಳಿಸಿಕೊಡಬಹುದು.



# ಪರಿಸರದ ಬಗೆಗಿನ ಏಕೈಕ ಕನ್ನಡ ಇ-ಮಾಸಿಕಕ್ಕೆ ನೀವೂ ಸಹ ಕೈ ಜೋಡಿಸಿ

## Join hands with the only Kannada e-magazine on environment

ಕಾನನ ಪತ್ರಿಕೆಯು ಹಲವಾರು ಸ್ವಯಂ ಸೇವಕರ ಸಹಾಯದಿಂದ ಯಶಸ್ವಿಯಾಗಿ ೧೫ ವರ್ಷಗಳಿಂದ ಪ್ರಕಟವಾಗುತ್ತಿದ್ದರೂ, ಅದರ ನಿರ್ವಹಣೆಗೆ (website) ಸ್ವಲ್ಪ ವೆಚ್ಚ ತಗುಲುತ್ತದೆ. ಆದ ಕಾರಣ ಸಹಾಯ ಮಾಡಲು ಇಚ್ಛಿಸುವ ದಾನಿಗಳು ದೇಣಿಗೆ ನೀಡುವ ಮೂಲಕ ಪ್ರೋತ್ಸಾಹಿಸಿ ಸಹಕರಿಸಬಹುದು.

With the help of many volunteers kaanana is reaching thousands of readers from past 15 years. But it requires some amount for its maintenance. Hence we request interested candidates to support kaanana by donating.

**Account details are as below ***

**Bank Name: Bank of Baroda**
**Account type: Current account**
**Account no: 67560200001138**
**Account Name: Wildlife Conservation Group**
**IFSC Code: BARB0VJRAGI (zero in middle)**



SCAN TO PAY
WITH ANY BHIM UPI APP
Merchant Name : WILDLIFE CONSERVATION GROUP

*- Donations are exempted from Income Tax under section 80 G (IT act 1961)

© ಮಹೇಂದ್ರ ಎಂ. ಹೆಗ್ಡೆ




# ಕಾನನ


ನಿಸರ್ಗವೆಡೆಗೆ ಪಯಣ

# ಕಾನನ ಸಿರಿ ಲೇಖನ ಸ್ಪರ್ಧೆ - 2025

WCG
Wildlife Conservation Group

## ಕಾನನ ಇ-ಮಾಸ ಪತ್ರಿಕೆಯ ವಾರ್ಷಿಕ ಲೇಖನ ಸ್ಪರ್ಧೆ




### ⏳ ನಿಮ್ಮ ಬರಹ ಕಳುಹಿಸಲು ಮರೆಯಬೇಡಿ!

ನಿಸರ್ಗ, ಸಂಸ್ಕೃತಿ ಮತ್ತು ಸಂರಕ್ಷಣೆಯ ಕುರಿತ ನಿಮ್ಮ ಕಥೆಗಳನ್ನು ನಮ್ಮೊಂದಿಗೆ ಹಂಚಿಕೊಳ್ಳಿ ಬಹುಮಾನ ಗೆಲ್ಲಿ.

### 📌 ವಿಷಯಗಳು:

ನನ್ನ ಹಸಿರು ಕಥೆ | ವನ್ಯಜೀವಿ ಸನ್ನಿವೇಶಗಳು | ವನ್ಯಜೀವಿ ಸಮಸ್ಯೆಗೆ ಪರಿಹಾರಗಳು | ಪ್ರಕೃತಿ ಕಲಿಕೆಯ ಚಟುವಟಿಕೆಗಳು | ಜನಪದ – ಸಂಸ್ಕೃತಿ – ಸಂರಕ್ಷಣೆ

🏆 ನಗದು ಬಹುಮಾನ + ವಿಶೇಷ ಪ್ರಶಸ್ತಿ
📖 ಆಯ್ಕೆಯಾದ ಬರಹಗಳು ಕಾನನದಲ್ಲಿ ಪ್ರಕಟಣೆ
📨 **ಕಳುಹಿಸಬೇಕಾದ ವಿಳಾಸ :** kaanana.mag@gmail.com
👉 **ಇ-ಮೇಲ್ ವಿಷಯ:** ಕಾನನ ಸಿರಿ ಲೇಖನ ಸ್ಪರ್ಧೆ 2025 – [ಲೇಖನದ ವಿಷಯ]
📅 **ಕೊನೆಯ ದಿನಾಂಕ:** 31ನೇ ಅಕ್ಟೋಬರ್ 2025

ನಿಮ್ಮಲ್ಲಿರುವ ಪರಿಸರದ ಜೊತೆಗಿನ ಅನುಭವಗಳನ್ನು ನಮ್ಮೊಂದಿಗೆ ಹಂಚಿಕೊಳ್ಳಿ, ಬಹುಮಾನ ಗೆಲ್ಲಿ.
ಕರುನಾಡ ಪ್ರಕೃತಿಯ ಆರಾಧನೆಗೆ ಕೈಜೋಡಿಸಿ.

📞 94839 96832 🌐 indiawcg.org 📍 Bangalore